ಕಾಗ

ನವೆಂಬರ್–2026

ನಿಸರ್ಗದೆಡೆಗೆ ಪಯಣ




WCG
Wildlife Conservation Group

ಕಾನನ

ನಿಸರ್ಗದೆಡೆಗೆ ಪಯಣ

© ಧನರಾಜ್ ಎಂ.



ಪ್ರಧಾನ ಸಂಪಾದಕರು

ಡಾ. ಅಶ್ವಥ ಕೆ. ಎನ್.

ಮುಖ್ಯ ಸಂಪಾದಕರು

ನಾಗೇಶ್ ಒ. ಎಸ್.

ಸಹ ಸಂಪಾದಕರು

ಧನರಾಜ್ ಎಂ.

ಮಹದೇವ ಕೆ. ಸಿ.

ಸಂಪಾದಕೀಯ ತಂಡ

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ

ಕ್ಷಮಾ ವಿ. ಭಾನುಪ್ರಕಾಶ್

ಕೃತಿಸ್ವಾಮ್ಯ © 2026 ವೈಲ್ಡ್‌ಲೈಫ್ ಕನ್ಸರ್ವೇಷನ್ ಗ್ರೂಪ್ (WCG)

ಕಾನನದಲ್ಲಿ ಪ್ರಕಟವಾಗುವ ಲೇಖನಗಳು, ಛಾಯಾಚಿತ್ರಗಳು ಮತ್ತು ಚಿತ್ರಕಲೆಗಳ ಕೃತಿಸ್ವಾಮ್ಯವು ಸಂಬಂಧಿತ ಲೇಖಕರು, ಛಾಯಾಗ್ರಾಹಕರು ಹಾಗೂ ಕಲಾವಿದರ ಬಳಿಯೇ ಇರುತ್ತದೆ.

ಶೈಕ್ಷಣಿಕ ಮತ್ತು ವಾಣಿಜ್ಯೇತರ ಉದ್ದೇಶಗಳಿಗಾಗಿ ಸೂಕ್ತ ಉಲ್ಲೇಖದೊಂದಿಗೆ ಮರುಬಳಕೆ ಮಾಡಬಹುದು.

ನವೆಂಬರ್–2026

WCG
Wildlife Conservation Group

ಲೇಖನಗಳು

* ಒಂದು ಅನಿರೀಕ್ಷಿತ ಕರೆ – ಕಾರ್ತಿಕ್ ಜಿ. ಸಾಲೆಹಿತ್ತಲ್
* ಹಸಿರು: ಬದುಕಿನ ಒಂದು ಭಾಗ – ಸ್ನೇಹಾ ಬಿ.ತಾಂಡೇಲ
* ಅಶ್ವತ್ಥ ಮರ: ಸಂಸ್ಕೃತಿ ಮತ್ತು ಪ್ರಕೃತಿಯ ಸೇತುವೆ (ವನಸುಮ) – ಹರ್ಷಿತ ಪಿ. ಹನುಮಯ್ಯ
* ವನಬಂಧ – 18 – ಸುಬ್ಬು ಬಾದಲ್
* ಎಲಾ... ಎಲೆಯೇ! (ಏವಿ ಅಂಕಣ) – ಜೈಕುಮಾರ್ ಆರ್.
* ಮಲೆನಾಡಿನ ಮಳೆ (ಕವನ) – ಸೌಮ್ಯ ಎಸ್. ಬಿ.
* ಪ್ರಕೃತಿ ಬಿಂಬ – ಚೈತನ್ಯ ಶರ್ಮ
  ದೀಪ್ತಿ ಎನ್.



ಮುಖಪುಟ ಛಾಯಾಚಿತ್ರ

ಬಾಳೆಗುಬ್ಬಿ

ಮುಖಪುಟ

ಚೈತನ್ಯ ಶರ್ಮ

ವಿನ್ಯಾಸ

ಧನರಾಜ್ ಎಂ.

© ಧನರಾಜ್ ಎಂ.




ಒಂದು ಅನಿರೀಕ್ಷಿತ ಕರೆ

ನಾನು ಚಿಟ್ಟೆಗಳನ್ನು ವೀಕ್ಷಿಸುವ ಮತ್ತು ಅವುಗಳ ಕುರಿತು ಅಧ್ಯಯನ ಮಾಡುವ ಹವ್ಯಾಸಿ. ಆದರೆ, ಈ ಹವ್ಯಾಸ ಒಂದು ದಿನ ನನ್ನನ್ನು ಅಪರೂಪದ ಶೋಧಯಾತ್ರೆಗೆ ಕರೆದೊಯ್ಯುವುದೆಂದು ಕನಸುಮನಸಿನಲ್ಲೂ ಎಣಿಸಿರಲಿಲ್ಲ.

ಅದು 2022ರ ಏಪ್ರಿಲ್ ತಿಂಗಳು. ಎಲ್ಲೆಡೆ ದರ್ಬೆ ಜಡ್ಡಿಗಳು (ಒಣ ಹುಲ್ಲುಗಾವಲುಗಳು) ಬಿಸಿಲಿಗೆ ಒಣಗಿ ನಿಂತು, ಕಾಳ್ಗಿಚ್ಚಿಗೆ ಆಹುತಿಯಾಗಲು ತಯಾರಾದಂತೆ ಕಾಣುತ್ತಿದ್ದವು. ಆದರೆ, ಚಿಟ್ಟೆಪ್ರಿಯರಿಗೆ ಇದು ಹಬ್ಬದ ಕಾಲ. ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಕೆಲವು ಚಿಟ್ಟೆ ಪ್ರಭೇದಗಳು ನದಿಯ ಒಣಗಿದ ದಡಗಳಲ್ಲಿ ಗುಂಪುಗೂಡಿ, ಲವಣಗಳನ್ನು ಹೀರುವ ವಿಸ್ಮಯದ ದೃಶ್ಯವನ್ನು ಸೃಷ್ಟಿಸುತ್ತಿದ್ದವು.

ಈ ವಿಸ್ಮಯವನ್ನು ಜನರಿಗೆ ಪರಿಚಯಿಸುವ ಸಲುವಾಗಿ, ಮೂಡಬಿದರೆಯ ಸಮೀಪದ ಬೆಳ್ವಾಯಿ ಎಂಬ ಪುಟ್ಟ ಗ್ರಾಮದಲ್ಲಿ ನನ್ನ ಗುರುಗಳಾದ ಶ್ರೀಯುತ ಸಮ್ಮಿಲನ್ ಶೆಟ್ಟಿ ಅವರು ಪ್ರತಿವರ್ಷ ಚಿಟ್ಟೆಗಳ ಕಾರ್ಯಾಗಾರವನ್ನು ಆಯೋಜಿಸುತ್ತಾರೆ. ಚಿಟ್ಟೆಗಳ ಮೇಲಿನ ನನ್ನ ಪ್ರೀತಿ ಪ್ರತಿವರ್ಷ ನನ್ನನ್ನು ಅಲ್ಲಿಗೆ ಸೆಳೆಯುತ್ತಿತ್ತು. ಮೂರು ದಿನಗಳ ಈ ಕಾರ್ಯಾಗಾರದಲ್ಲಿ ಸ್ವಯಂಸೇವಕರೊಂದಿಗೆ ಕೆಲಸ ಮಾಡುವುದರ ಜೊತೆಗೆ, ಚಿಟ್ಟೆ ತಜ್ಞರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವ ಅವಕಾಶವೂ ಸಿಗುತ್ತಿತ್ತು.



ಅದೇ ಸಂದರ್ಭದಲ್ಲಿ ನನಗೆ ಪ್ರದೀಪ್ ನಾಯಕ್ ಎಂಬ ಹೊಸ ಗೆಳೆಯರ ಪರಿಚಯವಾಯಿತು. ವಯಸ್ಸಿನಲ್ಲಿ ನನಗಿಂತ ದೊಡ್ಡವರಾದರೂ, 'ಬ್ರೋ' ಎಂದು ಕರೆಯುವ ಸ್ನೇಹಮಯ ವ್ಯಕ್ತಿತ್ವ ಅವರದು. ಅವರ ಸಾಹಸಮಯ ಅನುಭವಗಳ ಬಗ್ಗೆ ಮಾತನಾಡುತ್ತಿದ್ದಾಗ, ಅವರು, "ಬ್ರೋ, ನಾಳೆ ಫಾರೆಸ್ಟ್ ಎಕ್ಸ್‌ಪ್ಲೋರ್ ಮಾಡ್ಲಿಕ್ಕೆ ಹೋಗ್ತಿದ್ದೇನೆ. ಎಲ್ಲ ಹುಡುಕಾಡೋಣ, ಬರ್ತೀರಾ?" ಎಂದು ಕೇಳಿದರು. ಅದನ್ನು ಕೇಳಿ ನನಗೆ ಎಲ್ಲಿಲ್ಲದ ಖುಷಿ. ಆದರೆ, ಹೊನ್ನಾವರದಲ್ಲಿ ಬಿಟ್ಟು ಬಂದಿದ್ದ ನನ್ನ ಕೆಲಸ ಮತ್ತು ಖಾಲಿ ಇದ್ದ ಜೇಬು ನೆನಪಿಗೆ ಬಂದು ಉತ್ಸಾಹ ಇಳಿಯಿತು. "ನೀವು ಹೋಗಿ ಬಾಸ್, ನಾನು ಮತ್ತೆಂದಾದರೂ ಬರುವೆ," ಎಂದು ಹೇಳಿ, ನಿರಾಶೆಯಿಂದ ಹೊನ್ನಾವರಕ್ಕೆ ಹಿಂತಿರುಗಿದೆ.

ಕೆಲವು ದಿನಗಳ ನಂತರ ಪ್ರದೀಪ್ ಅವರಿಂದ ಒಂದು ಸಂದೇಶ ಬಂತು. ಅದನ್ನು ಓದಿದಾಗ ನನ್ನ ಹೊಟ್ಟೆ ಉರಿಯಿತು! ಅವರು ಹೀಗೆ ಬರೆದಿದ್ದರು: "ಬ್ರೋ, ಆ ದಿನ ಬನ್ನಿ ಅಂದರೆ ಬರಲಿಲ್ಲ. ಈಗ ನೋಡಿ, ನನಗೆ ಸಂಪಾಜೆ ಘಾಟಿಯಲ್ಲಿ 'Coorg Brush Flitter' ಸಿಕ್ಕಿದೆ! ರೇರ್ ಬ್ರೋ, ದಕ್ಷಿಣ ಭಾರತದಲ್ಲಿ ಇಷ್ಟು ವರ್ಷ ಯಾರಿಗೂ ಸಿಕ್ಕಿಲ್ಲ. ಫೋಟೋ ಕೂಡ ಇರಲಿಲ್ಲ! ಏಂತ ಬ್ರೋ, ನೀವು ಬರ್ಲಿಲ್ಲ!"

ಅದನ್ನು ಓದಿದಾಗ ನನಗೆ ಚಟಪಟ ಎನಿಸಿದ್ದು ಸುಳ್ಳಲ್ಲ. "ನಾನು ಆ ಸುಯೋಗದಿಂದ ವಂಚಿತನಾದೆ" ಎಂಬ ಹತಾಶೆ ಒಂದು ಕಡೆಯಾದರೆ, "ಎಂತಹ ಅದ್ಭುತ ಶೋಧವಿದು!" ಎಂಬ ಸಂತಸ ಇನ್ನೊಂದು ಕಡೆ. ಆದರೂ ತಕ್ಷಣವೇ, "ಕಂಗ್ರಾಜುಲೇಷನ್ಸ್ ಬಾಸ್," ಎಂದು ಹಾರೈಸಿದೆ. ಆದರೆ, 'Coorg Brush Flitter' ಎಂಬ ಚಿಟ್ಟೆಯ ಹೆಸರು ನನ್ನ ಕಿವಿಗೆ ಬಿದ್ದಿರಲಿಲ್ಲ. ಅದು ನನ್ನ ಕುತೂಹಲವನ್ನು ಕೆಣಕಿತು.

ಅದರ ಬಗ್ಗೆ ಅಂತರ್ಜಾಲದಲ್ಲಿ ಹುಡುಕಿದಾಗ, ಒಂದೆರಡು ಸಾಮಾನ್ಯ ತಾಣಗಳು ಸಿಕ್ಕವೇ ಹೊರತು ಹೆಚ್ಚಿನ ವಿವರಗಳು ಸಿಗಲಿಲ್ಲ. ಈ ವಿಷಯವನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳಬೇಕು ಎಂದು ನಿರ್ಧರಿಸಿ, ಆ ಚಿಟ್ಟೆಯ ಹಿನ್ನೆಲೆಯ ಕುರಿತು ಮಾಹಿತಿ ಹುಡುಕತೊಡಗಿದೆ.



ಈ ಹುಡುಕಾಟದಲ್ಲಿ ನನ್ನ ಗಮನ ಸೆಳೆದದ್ದು Evans, W. H. ಅವರು ಪ್ರಕಟಿಸಿದ್ದ A Catalogue of the Hesperiidae from Europe, Asia, and Australia in the British Museum ಎಂಬ ಪುಸ್ತಕ. ಅದರಲ್ಲಿ ಈ ಚಿಟ್ಟೆಯನ್ನು *Hyarotis microstictum coorga* ಎಂದು ಉಲ್ಲೇಖಿಸಲಾಗಿತ್ತು. ಈ ಉಪಪ್ರಭೇದದ ಕೊನೆಯ ದೃಢೀಕೃತ ದಾಖಲೆ 1927ರಲ್ಲಿ ಕೊಡಗಿನ ಸತ್ಯಿ ನದಿಯ ಬಳಿಯಿಂದ ದೊರೆತ ಮಾದರಿಯಾಗಿತ್ತು.

ಹೀಗಾಗಿ, 95 ವರ್ಷಗಳ ಬಳಿಕ ಸಂಪಾಜೆ ಘಾಟಿಯ ಪಯಸ್ವಿನಿ ನದಿ ಪ್ರದೇಶದಲ್ಲಿ ಈ ಚಿಟ್ಟೆ ಮತ್ತೆ ದಾಖಲಾಗಿರುವುದು ಮಹತ್ವದ ಸಂಗತಿಯಾಗಿತ್ತು. ಹಿಂದಿನ ದಾಖಲೆಗಳು ಬಹಳ ಸೀಮಿತವಾಗಿದ್ದವು.

ಈ ಐತಿಹಾಸಿಕ ಮತ್ತು ವೈಜ್ಞಾನಿಕ ಮಾಹಿತಿಯನ್ನು ಪ್ರದೀಪ್ ಹಾಗೂ ಗುರುಗಳೊಂದಿಗೆ ಹಂಚಿಕೊಂಡೆ. ಈ ಶೋಧವನ್ನು ವೈಜ್ಞಾನಿಕ ಲೇಖನದ ಮೂಲಕ ಜಗತ್ತಿಗೆ ತಿಳಿಸುವಂತೆ ಅವರಿಗೆ ಸಲಹೆ ನೀಡಿದೆ. ಅದರ ಫಲವಾಗಿ, Rediscovery of the South Indian Population of the Brush Flitter Butterfly Hyarotis microstictum coorga from Karnataka ಎಂಬ ಶೀರ್ಷಿಕೆಯಡಿ ಪ್ರದೀಪ್ ನಾಯಕ್ ಅವರ ವೈಜ್ಞಾನಿಕ ಲೇಖನ Bionotes ಪತ್ರಿಕೆಯಲ್ಲಿ ಜೂನ್ 2022ರಲ್ಲಿ ಪ್ರಕಟವಾಯಿತು.

ಆ ವೈಜ್ಞಾನಿಕ ಲೇಖನದ ಸಾರಾಂಶ ಹೀಗಿದೆ

ಪ್ರದೀಪ್ ನಾಯಕ್ ಅವರು ತಮ್ಮ ತಂಡದೊಂದಿಗೆ ನಡೆಸಿದ ಸಮೀಕ್ಷೆಯಲ್ಲಿ 2022ರ ಮಾರ್ಚ್ 18ರಿಂದ ಏಪ್ರಿಲ್ 18ರವರೆಗೆ ಈ ಚಿಟ್ಟೆಯನ್ನು ಗಮನಿಸಿದ್ದರು. ಈ ಅಧ್ಯಯನದ ವಿಶೇಷತೆಯೆಂದರೆ, *Hyarotis microstictum coorga* ಉಪಪ್ರಭೇದದ ನೈಸರ್ಗಿಕ ಪರಿಸರದಲ್ಲಿನ ಮೊದಲ ಛಾಯಾಚಿತ್ರಗಳನ್ನು ಅವರು ಪ್ರಕಟಿಸಿದ್ದರು.

ಈ ಚಿಟ್ಟೆಯ ಹೆಸರಿನಲ್ಲಿರುವ coorga ಎಂಬುದು *Hyarotis microstictum* ಪ್ರಭೇದದ ಒಂದು ಉಪಪ್ರಭೇದವೆಂದು ವೈಜ್ಞಾನಿಕ ಲೇಖನದಲ್ಲಿ ವಿವರಿಸಲಾಗಿದೆ. ಈ ಉಪಪ್ರಭೇದದ ತಿಳಿದಿರುವ ವಿತರಣೆ ಕರ್ನಾಟಕಕ್ಕೆ ಸೀಮಿತವಾಗಿದೆ. ಇದೇ ಪ್ರಭೇದದ ಇನ್ನೊಂದು ಉಪಪ್ರಭೇದವು ಈಶಾನ್ಯ ಭಾರತ ಸೇರಿದಂತೆ ಏಷ್ಯಾದ ಇತರ ಭಾಗಗಳಲ್ಲಿ ಕಂಡುಬರುತ್ತದೆ. ಈ ಚಿಟ್ಟೆಯ ಅಪರೂಪದ ದಾಖಲೆ ಮತ್ತು ಅದರ ಛಾಯಾಚಿತ್ರಗಳನ್ನು ದಾಖಲಿಸಿರುವುದು ಪ್ರದೀಪ್ ಅವರ ತಂಡದ ಮಹತ್ವದ ಕೊಡುಗೆ.


© ಕಾರ್ತಿಕ್ ಜಿ. ಸಾಲಹಿತ್ತಲ್

ಈ ಲೇಖನ ಪ್ರಕಟವಾದ ಕೆಲವು ತಿಂಗಳ ನಂತರ, ಒಂದು ಸಾಯಂಕಾಲ ಆರು ಗಂಟೆಯ ಹೊತ್ತಿಗೆ ನನಗೆ ಕರೆ ಬಂತು. "ಹಲೋ" ಎಂದಾಗ, ಮತ್ತೊಂದು ಕಡೆಯಿಂದ ಪ್ರದೀಪ್ ಅವರ ಉತ್ಸಾಹದ ಧ್ವನಿ ಕೇಳಿಸಿತು: "ಹಲೋ ಬ್ರೋ, ಹೇಗಿದ್ದೀರಿ? ಕೂರ್ಗ್ ಎಕ್ಸ್‌ಪೆಡಿಷನ್‌ಗೆ ಹೋಗೋಣ, ಬರ್ತೀರಾ? ಬರುವುದಾದರೆ, ರಾತ್ರಿ ಹನ್ನೊಂದು ಗಂಟೆಗೆ ಹೊನ್ನಾವರದಿಂದ ಬೆಳ್ಳಾಯಿಗೆ ಬಸ್ ಇದೆ. ಹತ್ತಿಬಿಡಿ, ಇವತ್ತೇ!"

ನಾನು ಆಲೋಚಿಸಿ ಹೇಳುತ್ತೇನೆಂದು ಫೋನ್ ಇಟ್ಟೆ. ಆದರೆ, ಆ ಅಪರೂಪದ ಚಿಟ್ಟೆಯನ್ನು ಕಣ್ಣಾರೆ ನೋಡಬೇಕೆಂಬ ಹಂಬಲ ಮತ್ತೆ ತೀವ್ರವಾಯಿತು. ಬಂದ ಅವಕಾಶವನ್ನು ಕಳೆದುಕೊಳ್ಳಬಾರದೆಂದು ನಿರ್ಧರಿಸಿದೆ. ತಕ್ಷಣವೇ ಅಪ್ಪನಿಂದ ಎರಡು ದಿನದ ರಜೆ ಮತ್ತು ಕೈಖರ್ಚಿಗೆ ಹಣ ಪಡೆದು, ಕ್ಯಾಮೆರಾ ಹಾಗೂ ಬಟ್ಟೆಗಳನ್ನು ಸಿದ್ಧಪಡಿಸಿಕೊಂಡೆ. ಊಟ ಮುಗಿಸಿ, ರಾತ್ರಿ ಹನ್ನೊಂದು ಗಂಟೆಯ ಬಸ್ ಹತ್ತಿ ಹೊನ್ನಾವರದಿಂದ ಹೊರಟೆ.

ಬೆಳಗಿನ ಜಾವ ಸುಮಾರು 2:45ಕ್ಕೆ ಬೆಳ್ಳಾಯಿ ತಲುಪಿದೆ. ಅಲ್ಲಿಂದ ಗುರುಗಳ ಮನೆಗೆ ನಡೆದುಹೋದೆ. ಪ್ರದೀಪ್ ಹಿಂದಿನ ಸಾಯಂಕಾಲವೇ ಬಂದು ತಂಗಿದ್ದರು. ಸ್ವಲ್ಪ ವಿಶ್ರಾಂತಿ ಪಡೆದ ಬಳಿಕ, ಸುಮಾರು 5:30ಕ್ಕೆ ಟೆಂಟ್ ಮತ್ತು ಸ್ಲೀಪಿಂಗ್ ಬ್ಯಾಗ್‌ಗಳನ್ನು ಕಾರಿನಲ್ಲಿ ತುಂಬಿಕೊಂಡು, ಸುಳ್ಯದ ಮಾರ್ಗವಾಗಿ ಸಂಪಾಜೆ ಕಡೆಗೆ ಹೊರಟೆವು.

ಸುಳ್ಯದಲ್ಲಿ ಉಪಾಹಾರ ಸೇವಿಸಿ, ಬೆಳಿಗ್ಗೆ ಸುಮಾರು 8:30ಕ್ಕೆ ಚಿಟ್ಟೆಯ ಹಿಂದಿನ ದಾಖಲೆ ದೊರೆತಿದ್ದ ಪ್ರದೇಶದ ಸಮೀಪ ತಲುಪಿದೆವು. ಸುತ್ತಲೂ ದಟ್ಟವಾದ ಕಾಡು, ಮಧ್ಯದಲ್ಲಿ ಹೆದ್ದಾರಿ; ವಾಹನ ಸಂಚಾರವೂ ಹೆಚ್ಚಾಗಿತ್ತು. ಒಂದು ಬದಿಯ ಗುಡ್ಡ ಕುಸಿದಿದ್ದರಿಂದ ಅಲ್ಲಿ ತಡೆಗೋಡೆ ನಿರ್ಮಾಣದ ಕೆಲಸವೂ ನಡೆಯುತ್ತಿತ್ತು!

ಕಾರಿನಿಂದ ಇಳಿದಾಗ ಪಯಸ್ವಿನಿ ನದಿ ಕಾಡಿನ ನಡುವೆ ಹರಿಯುತ್ತಿರುವುದು ಕಾಣಿಸಿತು. ಅಲ್ಲಿ ನಿಂತು ನನಗೆ ಒಂದು ಪ್ರಶ್ನೆ ಮೂಡಿತು: "ಇಷ್ಟೆಲ್ಲ ವಾಹನ ಸಂಚಾರ ಮತ್ತು ಮಾನವ ಚಟುವಟಿಕೆಗಳ ನಡುವೆಯೂ, ಈ ಚಿಟ್ಟೆ 95 ವರ್ಷಗಳ ಕಾಲ ಯಾರ ಕಣ್ಣಿಗೂ ಬೀಳದೆ ಹೇಗೆ ಉಳಿಯಿತು?" ಅಷ್ಟರಲ್ಲಿ ಪ್ರದೀಪ್, "ಬನ್ನಿ, ಇನ್ನು ತಡವೇಕೆ, ಹುಡುಕಾಟ ಶುರುಮಾಡೋಣ," ಎಂದರು. ಜೊತೆಗೆ, "ಡಾರ್ಕ್ ಕಲರ್‌ನ ಸ್ಕಿಪ್ಪರ್ (Skipper) ಚಿಟ್ಟೆಗಳ ಮೇಲೆ ಕಣ್ಣಿಡಿ ಬ್ರೋ," ಎಂದು ಸಲಹೆ ನೀಡಿದರು.

ಹುಡುಕಾಟ ಪ್ರಾರಂಭವಾಯಿತು. ಆ ಪ್ರದೇಶದಲ್ಲಿ ಹಲವು ಬಗೆಯ ಚಿಟ್ಟೆಗಳು ಕಣ್ಣಿಗೆ ಬಿದ್ದವು. ಕೆಲವು ಗಂಟೆಗಳು ಕಳೆದರೂ ನಾವು ಹುಡುಕುತ್ತಿದ್ದ *Hyarotis microstictum coorga* ಸಿಗಲಿಲ್ಲ. ಹುಡುಕಿ ಹುಡುಕಿ ಆಯಾಸಗೊಂಡು, ಪ್ರಯತ್ನ ಬಿಡುವ ಹಂತಕ್ಕೆ ತಲುಪಿದ್ದೆ.

ಅಷ್ಟರಲ್ಲಿ ಒಂದು ಕಂದುಬಣ್ಣದ ಚಿಟ್ಟೆ ಹಾರಿ ಬಂದು, Leea indica ಗಿಡದ ಮೇಲೆ ಕುಳಿತುಕೊಂಡಿತು. ಅದರ ಗಾತ್ರ ಮತ್ತು ಆಕಾರ ನಾವು ಹುಡುಕುತ್ತಿದ್ದ ಚಿಟ್ಟೆಯನ್ನು ಹೋಲುತ್ತಿತ್ತು. ಅದನ್ನು ಕಂಡ ತಕ್ಷಣ, "ಕೂರ್ಗ್!" ಎಂದು ಕೂಗಿದೆ. ಪ್ರದೀಪ್ ಮತ್ತು ಗುರುಗಳು ಧಾವಿಸಿ ಬಂದರು. ಆದರೆ, ಅದು ನಾವು ಹುಡುಕುತ್ತಿದ್ದ ಚಿಟ್ಟೆಯಾಗಿರಲಿಲ್ಲ; 'Partwing' ಎಂಬ ಮತ್ತೊಂದು ಚಿಟ್ಟೆಯಾಗಿತ್ತು. ನಮ್ಮ ಉತ್ಸಾಹ ಕ್ಷಣಾರ್ಧದಲ್ಲಿ ಕುಗ್ಗಿದರೂ, ಹುಡುಕಾಟ ಮುಂದುವರಿಸಿದೆವು.

ಸ್ವಲ್ಪ ಸಮಯದ ನಂತರ ಪ್ರದೀಪ್‌ಗೆ ಒಂದು ಗಿಡದ ಮೇಲೆ ಚಿಟ್ಟೆಯ ಮೊಟ್ಟೆಯೊಂದು ಕಂಡಿತು. ಅದು ಇತರ ಚಿಟ್ಟೆಗಳ ಮೊಟ್ಟೆಗಳಿಗಿಂತ ವಿಭಿನ್ನವಾಗಿ ಕಾಣುತ್ತಿತ್ತು. ಬಹುಶಃ ಇದು ಕೂರ್ಗ್ ಬ್ರಷ್ ಫ್ಲಿಟ್ಟರ್‌ನ ಮೊಟ್ಟೆಯಾಗಿರಬಹುದೇ ಎಂಬ ಅನುಮಾನ ಮೂಡಿತು. ಆದರೆ, ಅದನ್ನು ಸಂಗ್ರಹಿಸಿ ಪರಿಶೀಲಿಸಲು ನಮ್ಮ ಬಳಿ ಅಗತ್ಯ ಸಾಧನಗಳಾಗಲೀ, ಅಧಿಕೃತ ಅನುಮತಿಯಾಗಲೀ ಇರಲಿಲ್ಲ. ಆದ್ದರಿಂದ ಅದನ್ನು ಅಲ್ಲೇ ಬಿಟ್ಟು ಹುಡುಕಾಟ ಮುಂದುವರಿಸಿದೆವು.

ಮಧ್ಯಾಹ್ನವಾಯಿತು. ಹತ್ತಿರದಲ್ಲಿ ಊಟದ ವ್ಯವಸ್ಥೆ ಸಿಗದ ಕಾರಣ, ಕುರುಕುಲು ತಿಂಡಿ ತಿಂದು ಸ್ವಲ್ಪ ವಿಶ್ರಾಂತಿ ಪಡೆದೆವು. ಆ ಅಪರೂಪದ ಚಿಟ್ಟೆ ಕಣ್ಣಿಗೆ ಬೀಳದಿದ್ದರೂ, ಮೊಟ್ಟೆಯ ಕುರಿತು ಮೂಡಿದ್ದ ಕುತೂಹಲ ನಮ್ಮೊಳಗೆ ಉಳಿದಿತ್ತು.




ಮಧ್ಯಾಹ್ನ ಸುಮಾರು 2:30ಕ್ಕೆ ಮತ್ತೆ ಅದೇ ಸ್ಥಳಕ್ಕೆ ಮರಳಿದೆವು. ಎರಡು ಬಾರಿ ನಿರಾಸೆಯಾಗಿದ್ದರಿಂದ, ಅಲ್ಲಿ ಕಂಡ ಇತರ ಚಿಟ್ಟೆಗಳನ್ನು ಛಾಯಾಚಿತ್ರಗಳಲ್ಲಿ ದಾಖಲಿಸಲು ಆರಂಭಿಸಿದೆವು. ಆ ಕ್ಷಣಕ್ಕೆ, ನಾವು ಮೂಲತಃ ಹುಡುಕುತ್ತಿದ್ದ 'Hyarotis microstictum coorga' ಎಂಬ ಮೂಲ ಉದ್ದೇಶವೇ ಎಲ್ಲರಿಗೂ ಮರೆತಂತಾಗಿತ್ತು.

ಇಂತಹ ಸುಂದರ ಸೃಷ್ಟಿಯ ವಿಸ್ತಾರದಲ್ಲಿ, ಒಂದು ಸಣ್ಣ ಕಂದು ಚಿಟ್ಟೆಗಾಗಿ ಹಟ ಹಿಡಿದು ಕುಳಿತುಕೊಳ್ಳುವುದು ತರವಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದೆವು. ನಾವು ಹೀಗೆ ನಮ್ಮ ಹೊಸ ಕೆಲಸದಲ್ಲಿ ಮುಳುಗಿದ್ದಾಗ, ದೂರದಲ್ಲಿ — ಅಂದಾಜು ಹತ್ತು ಅಡಿ ಎತ್ತರದ Leea indica ಗಿಡದ ಮೇಲೆ — ಒಂದು ಕಂದುಬಣ್ಣದ ಚಿಕ್ಕ ಚಿಟ್ಟೆ ಮಧ್ಯಾಹ್ನದ ಸೂರ್ಯನ ಶಾಖವನ್ನು ಹೀರಿಕೊಳ್ಳಲು ಕುಳಿತಿತ್ತು. ನಾನು ಅದನ್ನು ಉಳಿದವರಿಗೆ ತೋರಿಸಿದೆ. ಪ್ರದೀಪ್ ಅದನ್ನು ನೋಡಿದ ತಕ್ಷಣ ಉತ್ಸಾಹದಿಂದ "ಬ್ರೋ, ಅದು ಕೂರ್ಗ್ ಬ್ರೋ!" ಎಂದು ಕೂಗಿದ.

ತಕ್ಷಣ ನಮ್ಮ ಕ್ಯಾಮೆರಾಗಳು ಅದರತ್ತ ಮುಗಿಬಿದ್ದವು. ಆದರೆ, ಚಿಟ್ಟೆ ಬಹಳ ಎತ್ತರದಲ್ಲಿ, ದಟ್ಟವಾದ ಎಲೆಗಳ ಮಧ್ಯದಲ್ಲಿ ಇದ್ದ ಕಾರಣ, ನಮಗೆ ಮನಸ್ಸಿಗೆ ಖುಷಿ ಕೊಡುವಂತಹ ಸ್ಪಷ್ಟ ಚಿತ್ರಗಳು ಸಿಗಲಿಲ್ಲ. ಆದರೂ, ಅದು ಅಲ್ಲಿ ಇದೆ ಎಂಬುದಕ್ಕೆ ಸಾಕ್ಷಿಯಾಗಿ ಸಾಕಾಗುವಷ್ಟು ಫೋಟೋಗಳು ದೊರೆತವು. 95 ವರ್ಷಗಳಿಂದ ದೃಢೀಕೃತ ದಾಖಲೆ ಇಲ್ಲದಿದ್ದ ಚಿಟ್ಟೆ ನಮ್ಮ ಕಣ್ಮುಂದೆ ಇತ್ತು!

ಆ ಚಿಟ್ಟೆಯನ್ನು ಇನ್ನಷ್ಟು ಸ್ಪಷ್ಟವಾಗಿ ದಾಖಲಿಸಲು ಪ್ರಯತ್ನಿಸಿದೆವು. ಆದರೆ, ಅದು ಎಲೆಗಳ ನಡುವೆ ಮಾಯವಾಗಿ ಹೋಯಿತು. ಮತ್ತೆ ಹುಡುಕಿದರೂ ಸಿಗಲಿಲ್ಲ. ಆ ಸಣ್ಣ ನೋಟವೇ ದೊಡ್ಡ ಸಾಧನೆಯಂತೆ ಅನಿಸಿತು; ಆದರೆ, ಅದನ್ನು ಇನ್ನಷ್ಟು ಹೊತ್ತು ವೀಕ್ಷಿಸಲಾಗಲಿಲ್ಲವೆಂಬ ಅತೃಪ್ತಿಯೂ ಉಳಿಯಿತು.



ಅಷ್ಟರಲ್ಲಿ ಅಲ್ಲಿನ ಅರಣ್ಯ ಇಲಾಖೆಯ ಒಬ್ಬ ಫಾರೆಸ್ಟ್ ವಾಚರ್ ಸಿಕ್ಕರು. ಅವರ ಸಹಾಯದಿಂದ ಪಯಸ್ವಿನಿ ನದಿಯ ದಡಕ್ಕೆ ತಲುಪಿದೆವು. ಅಲ್ಲಿ ಮರಳಿನ ಮೇಲೆ 'Yellow-breasted Flat' ಮತ್ತು 'Blue Admiral' ಮುಂತಾದ ಚಿಟ್ಟೆಗಳನ್ನು ಕಂಡು, ಅವುಗಳ ಚಿತ್ರಗಳನ್ನು ತೆಗೆದೆವು. ಪ್ರಕೃತಿಯ ಇಂತಹ ವಿಸ್ಮಯಗಳು ಇನ್ನೂ ಇಲ್ಲಿ ಉಳಿದಿವೆಯಲ್ಲ ಎಂಬ ಸಮಾಧಾನವಾಯಿತು. ಕತ್ತಲಾಗತೊಡಗಿದಾಗ, ಆನೆಗಳಿರುವ ಸಾಧ್ಯತೆಯನ್ನು ಮನದಲ್ಲಿಟ್ಟುಕೊಂಡು ಅಲ್ಲಿಂದ ಹೊರಟೆವು. ಅಂದು ರಾತ್ರಿ ಉಳಿದುಕೊಳ್ಳಲು ಪ್ರದೀಪ್ ಅವರ ಸಂಬಂಧಿಕರ ಮನೆಗೆ ಹೋದೆವು. ದಿನವಿಡೀ ನಡೆದ ಹುಡುಕಾಟ ಮತ್ತು ಕಂಡ ಚಿಟ್ಟೆಗಳ ಕುರಿತು ಚರ್ಚಿಸುತ್ತಾ, ಮರುದಿನದ ಯೋಜನೆ ರೂಪಿಸಿದೆವು. ಆ ಅಪರೂಪದ ಚಿಟ್ಟೆಯನ್ನು ಮತ್ತೊಮ್ಮೆ ನೋಡುವ ಆಸೆ ನಮ್ಮೊಳಗೆ ಜೀವಂತವಾಗಿತ್ತು.

ಮರುದಿನ ಬೆಳಿಗ್ಗೆ ಸುಮಾರು 4:30ಕ್ಕೆ ಎದ್ದು, ಸರಕು-ಸಾಮಾನುಗಳನ್ನು ಕಾರಿನಲ್ಲಿ ತುಂಬಿಕೊಂಡು ಆತಿಥ್ಯ ನೀಡಿದ ಮನೆಯವರಿಗೆ ಧನ್ಯವಾದ ಹೇಳಿ ಮತ್ತೊಂದು ಹುಡುಕಾಟಕ್ಕೆ ಸಿದ್ಧರಾದೆವು. ಆ ದಿನದ ಗುರಿ ಸಂಪಾಜೆ ಘಾಟಿಯ ಇನ್ನಷ್ಟು ಒಳಭಾಗ. ಅಲ್ಲಿ ಒಣಗಿದ ಒಂದು ತೋಡಿನಲ್ಲಿ 'Pluffy Tit' ಎಂಬ ಮತ್ತೊಂದು ಚಿಟ್ಟೆ ಕಂಡಿತು. ಅಭ್ಯಾಸದಂತೆ ಕ್ಯಾಮೆರಾಗಳು ತಕ್ಷಣವೇ ಅದರತ್ತ ತಿರುಗಿದವು. ಪ್ರಕೃತಿ ಯಾವಾಗಲೂ ಅನಿರೀಕ್ಷಿತ ಅತಿಥಿಗಳನ್ನು ಕಳುಹಿಸುತ್ತದೆ.

ಹೀಗೆ ಸುತ್ತುತ್ತಾ ಹತ್ತು ಗಂಟೆಯಾಯಿತು. ಈಗ ಬೆಳ್ಳಾವಿಗೆ ಹಿಂತಿರುಗಲೇಬೇಕಾದ ಒತ್ತಡ. ನಾವು ಹೊರಡಲು ಮನಸ್ಸು ಮಾಡಿದೆವು. ಕಾರಿನಲ್ಲಿ ಹೊರಟ ಸ್ವಲ್ಪ ದೂರದಲ್ಲಿ ರಸ್ತೆ ಮಧ್ಯೆ ಒಂದು ಸಣ್ಣ ಸೇತುವೆ ಸಿಕ್ಕಿತು. ನಮ್ಮೊಳಗಿನ ಚಿಟ್ಟೆ ಹುಡುಕುವ ಕುತೂಹಲ ಇನ್ನೂ ತಣಿದಿರಲಿಲ್ಲ. ಕಾರು ನಿಲ್ಲಿಸಿ ಕೆಳಗಿಳಿದೆವು.

ಅಲ್ಲಿ ಮತ್ತೊಂದು ಕಂದುಬಣ್ಣದ ಚಿಟ್ಟೆ Leea indica ಗಿಡದ ಮೇಲೆ ಕುಳಿತು ಮಕರಂದ ಹೀರುತ್ತಿತ್ತು. ಒಂದು ನಿಮಿಷ ಗಮನವಿಟ್ಟು ನೋಡಿದಾಗ, ಅದು ನಮ್ಮ ಕೂರ್ಗ್ ಬ್ರಷ್ ಫ್ಲಿಟ್ಟರ್ ಎಂಬುದು ಖಚಿತವಾಯಿತು! ಈ ಬಾರಿ ಯಾರಿಗೂ ಕೂಗುವ ಅಗತ್ಯವೇ ಇರಲಿಲ್ಲ. ಖುಷಿ, ಸಡಗರ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಶಾಂತವಾದ ಆತ್ಮತೃಪ್ತಿ ನಮ್ಮನ್ನು ಆವರಿಸಿತು.



ಹಿಂದಿನ ದಿನ ಕೈಗೆ ಸಿಗದೆ ನಿರಾಶೆಗೊಳಿಸಿದ್ದ ಚಿಟ್ಟೆ, ಇಂದು ನಮ್ಮ ಕಣ್ಮುಂದೆ ಕಾಣಿಸಿಕೊಂಡಿತ್ತು. ನಾವು ಮೂವರೂ ಅದನ್ನು ವಿವಿಧ ಕೋನಗಳಿಂದ ಛಾಯಾಚಿತ್ರಗಳಲ್ಲಿ ದಾಖಲಿಸಿದೆವು. ಒಂದು ಸಣ್ಣ ಕಂದುಬಣ್ಣದ ಚಿಟ್ಟೆ, ದಶಕಗಳ ಕಾಲದ ದಾಖಲೆಗಳ ಇತಿಹಾಸವನ್ನು ಹೊತ್ತು ನಮ್ಮ ಕಣ್ಮುಂದೆ ಹಾರಾಡುತ್ತಿತ್ತು.

ಈ ಅನುಭವವನ್ನು ಬರೀ ಚಿತ್ರಗಳಲ್ಲಿ ಹಿಡಿಯಲು ಸಾಧ್ಯವಿಲ್ಲ. ಸಾಯಂಕಾಲ ಕವಿಯಲಾರಂಭಿಸಿದಾಗ, ಭಾರವಾದ ಮನಸ್ಸಿನಿಂದ ಚಿಟ್ಟೆಯನ್ನು ಅದರ ಪಾಡಿಗೆ ಬಿಟ್ಟು ಬೆಳ್ಳಾವಿ ಕಡೆಗೆ ಹಿಂತಿರುಗಿದೆವು. ಆದರೆ, ಆ ಅಪರೂಪದ ಚಿಟ್ಟೆಯನ್ನು ಕಂಡು ದಾಖಲಿಸಿದ ತೃಪ್ತಿ ನಮ್ಮೊಂದಿಗಿತ್ತು.


ಬೆಳ್ಳಾವಿಯಿಂದ ಬಸ್ ಹತ್ತಿ ಹೊನ್ನಾವರಕ್ಕೆ ಹಿಂತಿರುಗಿದೆ. ರಾತ್ರಿ ಹನ್ನೆರಡು ಗಂಟೆಯ ಸುಮಾರಿಗೆ ಮನೆ ಸೇರಿದೆ. ಆ ದಿನಗಳು ಕೇವಲ ಸಾಹಸದ ದಿನಗಳಾಗಿರಲಿಲ್ಲ; ಪ್ರಕೃತಿಯ ಸಣ್ಣ ರಹಸ್ಯವೊಂದನ್ನು ಅರಿಯಲು ನಡೆಸಿದ ಹುಡುಕಾಟದ, ನನ್ನ ಹವ್ಯಾಸದ ಪಯಣದಲ್ಲಿ ಎಂದಿಗೂ ಮರೆಯಲಾಗದ ಅನುಭವವಾಗಿದ್ದವು.

ವೈಜ್ಞಾನಿಕ ಉಲ್ಲೇಖ: Nayak, Pradeep. “Rediscovery of the South Indian Population of the Brush Flitter Butterfly Hyarotis microstictum coorga from Karnataka.” Bionotes, Vol. 24 (1&2), June 2022.



ಲೇಖನ: ಕಾರ್ತಿಕ್ ಜಿ. ಸಾಲೆಹಿತ್ತಲ್

ದಕ್ಷಿಣ ಕನ್ನಡ ಜಿಲ್ಲೆ




ಹಸಿರು: ಬದುಕಿನ ಒಂದು ಭಾಗ

ಹಸಿರು ಎಂದರೆ ಕೇವಲ ಒಂದು ಬಣ್ಣವಲ್ಲ. ಅದು ಹೊಸ ಚಿಗುರಿನ ಭರವಸೆ, ಮರದ ನೆರಳಿನ ನೆಮ್ಮದಿ, ಮಳೆಯ ನಂತರ ಮಣ್ಣಿನಿಂದ ಹೊರಹೊಮ್ಮುವ ಜೀವಾಂಕುರ. ಪ್ರಕೃತಿಯ ಹಸಿರನ್ನು ನೋಡಿದಾಗ ಮನಸ್ಸಿಗೆ ಸಂತೋಷವಾಗುತ್ತದೆ. ಆದರೆ ಈ ಹಸಿರು ನಮ್ಮ ಬದುಕಿನಲ್ಲಿ ಎಷ್ಟು ಮುಖ್ಯ ಎಂಬುದನ್ನು ನಾವು ಪ್ರತಿದಿನವೂ ಗಮನಿಸುತ್ತಿದ್ದೇವೆಯೇ?

ನನ್ನ ಬಾಲ್ಯದ ನೆನಪುಗಳಲ್ಲಿ ಹಸಿರಿಗೆ ವಿಶೇಷ ಸ್ಥಾನವಿದೆ. ನಾನು ಶಾಲೆಗೆ ಹೋಗುವ ದಾರಿಯ ಪಕ್ಕದಲ್ಲಿ ಒಂದು ದೊಡ್ಡ ಆಲದ ಮರವಿತ್ತು. ಅದರ ನೆರಳಿನಲ್ಲಿ ಕುಳಿತು ಪುಸ್ತಕ ಓದುವುದು, ಅಮ್ಮ ತಯಾರಿಸಿದ ತಿಂಡಿಗಳನ್ನು ತಿನ್ನುವುದು ನನ್ನ ದಿನಚರಿಯ ಭಾಗವಾಗಿತ್ತು. ಸುಡು ಬಿಸಿಲಿನಲ್ಲೂ ಆ ಮರದ ಕೆಳಗೆ ಸಿಗುತ್ತಿದ್ದ ತಂಪು, ಸುತ್ತಲಿನ ವಾತಾವರಣ ನೀಡುತ್ತಿದ್ದ ನೆಮ್ಮದಿ ಇಂದಿಗೂ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದಂತೆ ಉಳಿದಿದೆ. ಅಂದು ಆ ಮರ ನನಗೆ ಕೇವಲ ಒಂದು ಮರವಾಗಿರಲಿಲ್ಲ; ಅದು ನನ್ನ ಬಾಲ್ಯದ ಗೆಳೆಯನಂತಿತ್ತು. ಪ್ರಕೃತಿಯೊಂದಿಗಿನ ನನ್ನ ಸಂಬಂಧಕ್ಕೆ ಇಂತಹ ಸಣ್ಣ ಅನುಭವಗಳೇ ಅಡಿಪಾಯವಾಗಿರಬಹುದು.







ನಾವು ಸಾಮಾನ್ಯವಾಗಿ ಹಸಿರನ್ನು ಸೌಂದರ್ಯದ ದೃಷ್ಟಿಯಿಂದ ನೋಡುತ್ತೇವೆ. ಹೊಲದಲ್ಲಿ ತಲೆದೂಗುವ ಪೈರು, ಮಳೆಯ ನಂತರ ಚಿಗುರೊಡೆಯುವ ಸಸ್ಯ, ಮರದ ಕೊಂಬೆಗಳಲ್ಲಿ ಮೂಡುವ ಎಳೆಯ ಎಲೆಗಳು ಕಣ್ಣಿಗೆ ಹಿತವನ್ನು ನೀಡುತ್ತವೆ. ಆದರೆ ಈ ಸೌಂದರ್ಯದ ಹಿಂದೆ ಒಂದು ದೊಡ್ಡ ಪರಿಸರ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿದೆ. ಸಸ್ಯಗಳು ದ್ಯುತಿಸಂಶ್ಲೇಷಣೆಯ ಮೂಲಕ ಆಹಾರ ತಯಾರಿಸಿ ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಮರಗಳು ಅನೇಕ ಪಕ್ಷಿ, ಕೀಟ ಮತ್ತು ಇತರ ಜೀವಿಗಳಿಗೆ ಆಹಾರ ಹಾಗೂ ಆಶ್ರಯ ಒದಗಿಸುತ್ತವೆ. ಸಸ್ಯವರ್ಗವು ಮಣ್ಣಿನ ಸವಕಳಿಯನ್ನು ತಡೆಯಲು, ನೀರಿನ ಚಕ್ರಕ್ಕೆ ನೆರವಾಗಲು ಮತ್ತು ಸ್ಥಳೀಯ ಹವಾಮಾನದ ಮೇಲೆ ಪ್ರಭಾವ ಬೀರಲು ಸಹಕಾರಿಯಾಗುತ್ತವೆ.

ಆದರೆ ಇಂದು ಅಭಿವೃದ್ಧಿಯ ಹೆಸರಿನಲ್ಲಿ ನೈಸರ್ಗಿಕ ಹಸಿರು ಕಡಿಮೆಯಾಗುತ್ತಿದೆ. ಕಟ್ಟಡಗಳು, ರಸ್ತೆಗಳು ಮತ್ತು ಇತರ ಮೂಲಸೌಕರ್ಯಗಳ ಬೇಡಿಕೆಗಳಿಂದ ಮರಗಳು ಹಾಗೂ ನೈಸರ್ಗಿಕ ಆವಾಸಸ್ಥಾನಗಳು ನಾಶವಾಗುತ್ತಿವೆ. ವಾಹನಗಳ ಹೊಗೆ, ಕೈಗಾರಿಕಾ ಮಾಲಿನ್ಯ, ತ್ಯಾಜ್ಯದ ಅಸಮರ್ಪಕ ವಿಲೇವಾರಿ ಮತ್ತು ಜಲಮೂಲಗಳ ಮಾಲಿನ್ಯ ಪರಿಸರದ ಮೇಲೆ ಅಗಾಧವಾದ ಒತ್ತಡವನ್ನು ಹೆಚ್ಚಿಸುತ್ತಿವೆ. ಇದರ ಪರಿಣಾಮ ಕೇವಲ ಮರಗಳಿಗಷ್ಟೇ ಸೀಮಿತವಾಗಿಲ್ಲ; ಅವುಗಳನ್ನು ಅವಲಂಬಿಸಿರುವ ಪಕ್ಷಿಗಳು, ಕೀಟಗಳು, ಪ್ರಾಣಿಗಳು ಮತ್ತು ಮಾನವ ಸಮುದಾಯಗಳ ಮೇಲೆಯೂ ಬೀರುತ್ತದೆ.



ನಮ್ಮ ಸಂಸ್ಕೃತಿಯಲ್ಲಿ ಪ್ರಕೃತಿಗೆ ವಿಶೇಷ ಸ್ಥಾನವಿದೆ. ತುಳಸಿ, ಬೇವು, ಅರಳಿ ಮತ್ತು ಆಲದಂತಹ ಮರಗಳು ಹಾಗೂ ಸಸ್ಯಗಳು ಅನೇಕ ಸಂಪ್ರದಾಯಗಳೊಂದಿಗೆ ಬೆಸೆದುಕೊಂಡಿವೆ. ಇಂತಹ ಆಚರಣೆಗಳು ಪ್ರಕೃತಿಯ ಬಗ್ಗೆ ಗೌರವ ಬೆಳೆಸಲು ನೆರವಾಗಬಹುದು. ಆದರೆ ಪ್ರಕೃತಿಯನ್ನು ಗೌರವಿಸುವುದು ಆಚರಣೆಗಳಿಗೆ ಮಾತ್ರ ಸೀಮಿತವಾಗಬಾರದು. ಮರಗಳನ್ನು ಉಳಿಸುವುದು, ಜಲಮೂಲಗಳನ್ನು ಕಾಪಾಡುವುದು ಮತ್ತು ಜೀವವೈವಿಧ್ಯವನ್ನು ಸಂರಕ್ಷಿಸುವುದು ನಮ್ಮ ದೈನಂದಿನ ಬದುಕಿನ ಭಾಗವಾಗಬೇಕು.


© ಧನುಷ್ ಆರ್. ಎಸ್.

ಹಸಿರು ಪರಿಸರವು ನಮ್ಮ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮಕ್ಕೂ ಮುಖ್ಯವಾಗಿದೆ. ಉದ್ಯಾನಗಳಲ್ಲಿ ನಡೆಯುವುದು, ಮರಗಳ ನೆರಳಿನಲ್ಲಿ ಸ್ವಲ್ಪ ಸಮಯ ಕಳೆಯುವುದು ಅಥವಾ ಪ್ರಕೃತಿಯನ್ನು ಗಮನಿಸುವುದು ದೈನಂದಿನ ಒತ್ತಡದಿಂದ ವಿರಾಮ ಪಡೆಯಲು ನೆರವಾಗಬಹುದು. ನಗರ ಪ್ರದೇಶಗಳಲ್ಲಿ ಮರಗಳು ನೆರಳು ಒದಗಿಸುವುದರ ಜೊತೆಗೆ ಸುತ್ತಮುತ್ತಲಿನ ತಾಪಮಾನವನ್ನು ತಗ್ಗಿಸಲು ಸಹಾಯ ಮಾಡುತ್ತವೆ. ಹೀಗಾಗಿ ಹಸಿರು ಎಂದರೆ ಕೇವಲ ಕಣ್ಣಿಗೆ ಕಾಣುವ ಸೌಂದರ್ಯವಲ್ಲ; ಅದು ವಾಸಿಸಲು ಯೋಗ್ಯವಾದ ಉತ್ತಮ ಪರಿಸರದ ಪ್ರಮುಖ ಭಾಗವೂ ಹೌದು.

ಹಸಿರನ್ನು ಉಳಿಸುವ ಹೊಣೆಗಾರಿಕೆ ಸರ್ಕಾರ ಅಥವಾ ಪರಿಸರ ಸಂಘಟನೆಗಳಿಗೆ ಮಾತ್ರ ಸೇರಿದ್ದಲ್ಲ. ಪ್ರತಿಯೊಬ್ಬರೂ ತಮ್ಮ ಪರಿಸರದಲ್ಲಿ ಸಣ್ಣ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಮನೆಯಂಗಳದಲ್ಲಿ ಸೂಕ್ತವಾದ ಗಿಡಗಳನ್ನು ಬೆಳೆಸುವುದು, ನೀರನ್ನು ಮಿತವಾಗಿ ಬಳಸುವುದು, ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು ಮತ್ತು ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡುವುದರಿಂದ ಪರಿಸರದ ಮೇಲೆ ಆಗುತ್ತಿರುವ ವ್ಯತಿರಿಕ್ತ ಪರಿಣಾಮಗಳನ್ನು ಕಡಿಮೆಮಾಡಬಹುದು. ಅದರ ಜೊತೆಗೆ ಮಕ್ಕಳಿಗೆ ಸಸ್ಯಗಳು ಹಾಗೂ ಸ್ಥಳೀಯ ಜೀವವೈವಿಧ್ಯದ ಪರಿಚಯ ಮಾಡಿಸುವುದು. ಗಿಡ ನೆಡುವ ಕಾರ್ಯಕ್ರಮಗಳನ್ನು ಆಯೋಜಿಸುವುದರ ಜೊತೆಗೆ ನೆಟ್ಟ ಗಿಡಗಳು ಬದುಕಿ ಬೆಳೆಯುವವರೆಗೆ ಅವುಗಳನ್ನು ನೋಡಿಕೊಳ್ಳುವುದಕ್ಕೂ ಆದ್ಯತೆ ನೀಡಬೇಕು. ಈಗಾಗಲೇ ಇರುವ ಕಾಡು ಮತ್ತು ನೈಸರ್ಗಿಕ ಪ್ರದೇಶಗಳಲ್ಲಿ ಸ್ಥಳೀಯ ಸಸ್ಯವರ್ಗವನ್ನು ಉಳಿಸುವುದು, ಹೊಸದಾಗಿ ಗಿಡ ನೆಡುವುದಷ್ಟೇ ಮುಖ್ಯ ಎಂಬುದನ್ನು ಎಂದೂ ನಾವು ಮರೆಯಬಾರದು.



ನನ್ನ ಹಸಿರು ಕನಸು ಎಂದರೆ ಪ್ರತಿಯೊಂದು ಮನೆಯಲ್ಲೂ ಗಿಡವಿರಬೇಕು ಎಂಬುದಷ್ಟೇ ಅಲ್ಲ; ಪ್ರತಿಯೊಬ್ಬರ ಮನದಲ್ಲೂ ಪ್ರಕೃತಿಯ ಬಗ್ಗೆ ಕಾಳಜಿ ಇರಬೇಕು. ಮಕ್ಕಳು ಮರಗಳನ್ನು ಕೇವಲ ಪಠ್ಯಪುಸ್ತಕದ ಚಿತ್ರಗಳಾಗಿ ನೋಡದೆ, ಅವುಗಳ ನೆರಳಿನಲ್ಲಿ ಕುಳಿತು, ಎಲೆಗಳನ್ನು ಗಮನಿಸಿ, ಪಕ್ಷಿಗಳ ಕೂಗನ್ನು ಆಲಿಸಿ ಪ್ರಕೃತಿಯನ್ನು ಅನುಭವಿಸಬೇಕು. ಒಂದು ಮರದ ಹೆಸರು ತಿಳಿದುಕೊಳ್ಳುವುದರಿಂದ ಆರಂಭವಾಗುವ ಆಸಕ್ತಿ, ಮುಂದೆ ಪರಿಸರ ಮಹತ್ವವನ್ನು ಅರಿತು ಸಂರಕ್ಷಣೆಯಲ್ಲಿ ಭಾಗವಹಿಸುವ ಮನೋಭಾವವಾಗಿ ಬೆಳೆಯಬಹುದು.

ಬಾಲ್ಯದಲ್ಲಿ ನಾನು ಆಶ್ರಯ ಪಡೆದಿದ್ದ ಆಲದ ಮರವನ್ನು ನೆನಪಿಸಿಕೊಂಡಾಗ, ಪ್ರಕೃತಿ ನಮಗೆ ಎಷ್ಟು ಸುಲಭವಾಗಿ ಸಂತೋಷ ಮತ್ತು ನೆಮ್ಮದಿಯನ್ನು ನೀಡುತ್ತದೆ ಎಂಬುದು ಅರಿವಾಗುತ್ತದೆ. ಮರಗಳು ನಮ್ಮಿಂದ ಏನನ್ನೂ ಕೇಳುವುದಿಲ್ಲ. ಆದರೂ ಅವು ನೆರಳು ನೀಡುತ್ತವೆ, ಅನೇಕ ಜೀವಿಗಳಿಗೆ ಆಶ್ರಯವಾಗುತ್ತವೆ ಮತ್ತು ಪರಿಸರದ ಸಮತೋಲನ ಕಾಪಾಡುವಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುತ್ತವೆ. ಅವುಗಳ ಮೌಲ್ಯವನ್ನು ಅರಿಯುವುದು ಮತ್ತು ಅವುಗಳನ್ನು ಮುಂದಿನ ಪೀಳಿಗೆಗೂ ಉಳಿಸುವುದು ನಮ್ಮ ಜವಾಬ್ದಾರಿ.


ಹಸಿರು ನಮ್ಮ ಬಣ್ಣವಲ್ಲ, ಅದು ನಮ್ಮ ಬದುಕು.

ಪ್ರಕೃತಿಯನ್ನು ಪ್ರೀತಿಸುವುದು ಎಂದರೆ ಅದರ ಸೌಂದರ್ಯವನ್ನು ಆನಂದಿಸುವುದಷ್ಟೇ ಅಲ್ಲ; ಅದರ ಅಸ್ತಿತ್ವವನ್ನು ಗೌರವಿಸಿ, ಅದನ್ನು ಉಳಿಸಲು ನಮ್ಮ ಕೈಲಾದ ಪ್ರಯತ್ನ ಮಾಡುವುದಾಗಿದೆ. ನಾವು ಪ್ರಕೃತಿಯೊಂದಿಗೆ ಹೊಂದಿರುವ ಸಂಬಂಧವನ್ನು ಅರಿತು ಬದುಕಿದಾಗ ಮಾತ್ರ ಹಸಿರು ಮುಂದಿನ ಪೀಳಿಗೆಗಳ ಬದುಕಿನಲ್ಲಿಯೂ ಉಳಿಯುತ್ತದೆ.

ಲೇಖನ: ಸ್ನೇಹಾ ಬಿ. ತಾಂಡೇಲ

ಉತ್ತರ ಕನ್ನಡ ಜಿಲ್ಲೆ

ಅಶ್ವತ್ಥ ಮರ: ಸಂಸ್ಕೃತಿ ಮತ್ತು ಪ್ರಕೃತಿಯ ಸೇತುವೆ



Peepul tree


Ficus religiosa

ಏನೇ ಕಷ್ಟ ಬಂದ್ರೂ ನಮ್ಮ ಹಿರಿಯರು ಹೇಳೋ ಒಂದು ಸಾಮಾನ್ಯ ಮಾತು "ಅರಳಿ ಮರ ಸುತ್ತು! ಸರಿ ಆಗುತ್ತೆ" ಎಂದು. ಏನೇ ಸಮಸ್ಯೆ ಇದ್ರೂ ಅರಳಿ ಮರ ಸುತ್ತಿದ್ರೆ ಒಳ್ಳೇದಾಗುತ್ತೆ ಅನ್ನೋ ನಂಬಿಕೆ ನಮ್ಮಲ್ಲಿ ಬಹಳ ಹಿಂದಿನಿಂದಲೂ ಇದೆ. ಇದು ನಿಜವೋ? ಸುಳ್ಳೋ? ಅದರ ಮಾತು ಈಗ ಬಿಡಿ! ನಾವು ಈಗ ಇದರ ವೈಜ್ಞಾನಿಕ ಮಾಹಿತಿಯ ಬಗ್ಗೆ ತಿಳಿದು ಯಾಕೆ ಹಿರಿಯರು ಅರಳಿ ಮರಕ್ಕೆ ಅಷ್ಟು ಪ್ರಾಮುಖ್ಯತೆ ನೀಡಿರಬಹುದು ಎಂಬುದನ್ನು ಒಮ್ಮೆ ಅವಲೋಕಿಸೋಣ.

ಮೊರಾಸಿ (Moraceae) ಕುಟುಂಬಕ್ಕೆ ಸೇರಿದ ಈ ಮರವು ಭಾರತದ ಸಾಂಸ್ಕೃತಿಕ ಹಾಗೂ ಪರಿಸರ ಮಹತ್ವ ಹೊಂದಿರುವ ಮರಗಳಲ್ಲಿ ಒಂದು.

ಎಲೆಯೇ ಇದರ ಗುರುತು: ಹೃದಯಾಕಾರದ ಎಲೆ, ಉದ್ದ ಬಾಲದಂತಿರುವ ತುದಿ ಮತ್ತು ತೆಳುವಾದ ಎಲೆಯ ರಚನೆ ಅರಳಿ ಮರವನ್ನು ಸುಲಭವಾಗಿ ಗುರುತಿಸಲು ಸಹಾಯ ಮಾಡುತ್ತದೆ. ಎಲೆಯ ಉದ್ದನೆಯ ತುದಿಯು ಮಳೆಯ ನೀರು ಜಾರಿಹೋಗಲು ನೆರವಾಗುತ್ತದೆ. ಈ ವಿಶಿಷ್ಟ ಎಲೆಗಳೇ ಅಶ್ವತ್ಥ ಮರದ ಪ್ರಮುಖ ಗುರುತುಗಳಲ್ಲಿ ಒಂದು.

ಹೂವಿನ ಹಿಂದಿರುವ ಕುತೂಹಲ: ಅಶ್ವತ್ಥಕ್ಕೆ ಹೂಗಳೇ ಇಲ್ಲವೆಂದು ಕೆಲವರು ಭಾವಿಸುತ್ತಾರೆ. ವಾಸ್ತವವಾಗಿ ಹೂವುಗಳು ಹೊರಗೆ ಕಾಣಿಸುವುದಿಲ್ಲ. ಅವು ಸೈಕೋನಿಯಂ (syconium) ಎಂಬ ವಿಶೇಷ ರಚನೆಯೊಳಗೆ ಬೆಳೆಯುತ್ತವೆ. ಈ ಕಾರಣದಿಂದ ಈ ಮರದ ಹೂವು ಪ್ರಕೃತಿಯಲ್ಲಿರುವ ಒಂದು ಅದ್ಭುತ ವಿನ್ಯಾಸವೆನಿಸುತ್ತದೆ.



ಒಂದು ಸಣ್ಣ ಕೀಟದೊಂದಿಗೆ ದೊಡ್ಡ ಸಂಬಂಧ: ಈ ಮರದ ಸಂತಾನೋತ್ಪತ್ತಿಯಲ್ಲಿ *Platyscapa quadraticeps* ಎಂಬ ಸಣ್ಣ ಅಂಜೂರದ ಕಣಜ (fig wasp) ಪ್ರಮುಖ ಪಾತ್ರವಹಿಸುತ್ತದೆ. ಈ ಕಣಜವು ಅಶ್ವತ್ಥದ ಸೈಕೋನಿಯಂನೊಳಗೆ ಪ್ರವೇಶಿಸಿ ಪರಾಗಸ್ಪರ್ಶಕ್ಕೆ ನೆರವಾಗುತ್ತದೆ. ಮರವು ಕಣಜಕ್ಕೆ ಸಂತಾನೋತ್ಪತ್ತಿಯ ತಾಣವನ್ನು ಒದಗಿಸಿದರೆ, ಕಣಜವು ಮರದ ಪರಾಗಸ್ಪರ್ಶಕ್ಕೆ ನೆರವಾಗುತ್ತದೆ. ಮರ ಮತ್ತು ಕೀಟದ ನಡುವಿನ ಈ ಸಂಬಂಧವು ಪರಸ್ಪರ ಅವಲಂಬಿತ ಸಹಜೀವನದ ಆಸಕ್ತಿದಾಯಕ ಉದಾಹರಣೆಯಾಗಿದೆ.

ಪಕ್ಷಿಗಳ ಊಟದ ಮನೆ: ಇದರ ಸಣ್ಣ ಹಣ್ಣುಗಳು ಮಾಗಿದಾಗ ವಿವಿಧ ಪಕ್ಷಿಗಳಿಗೆ ಆಹಾರವಾಗುತ್ತವೆ. ಪಕ್ಷಿಗಳು ಹಣ್ಣುಗಳನ್ನು ತಿಂದು, ಬೀಜಗಳನ್ನು ಬೇರೆ ಸ್ಥಳಗಳಿಗೆ ಹರಡುವುದರಿಂದ ಈ ಮರದ ಬೀಜ ಪ್ರಸರಣಕ್ಕೂ ನೆರವಾಗುತ್ತದೆ. ಹೀಗೆ ಅಶ್ವತ್ಥ ಮರವು ಪಕ್ಷಿಗಳ ಆಹಾರ ಸರಪಳಿಯಲ್ಲಿಯೂ ಪ್ರಮುಖ ಪಾತ್ರವಹಿಸುತ್ತದೆ.

ಬೀಜದಿಂದ ದೊಡ್ಡ ಮರದವರೆಗೆ: ಈ ಮರದ ಬೀಜಗಳು ಕೆಲವೊಮ್ಮೆ ಬೇರೆ ಮರಗಳ ಕೊಂಬೆಗಳ ಮೇಲೆ ಅಥವಾ ಕಟ್ಟಡಗಳ ಬಿರುಕುಗಳಲ್ಲಿಯೂ ಮೊಳಕೆಯೊಡೆಯುವುದನ್ನು ನೀವು ನೋಡಿರಬಹುದು. ಆರಂಭದಲ್ಲಿ ಸಣ್ಣ ಸಸಿಯಾಗಿ ಬೆಳೆಯುವ ಇದು, ಕ್ರಮೇಣ ತನ್ನ ಬೇರುಗಳನ್ನು ಕೆಳಕ್ಕೆ ಹರಡುತ್ತಾ ದೊಡ್ಡ ಮರವಾಗಿ ಬೆಳೆಯಬಲ್ಲದು. ಕಟ್ಟಡಗಳ ಬಿರುಕುಗಳಲ್ಲಿ ಬೆಳೆದರೆ, ಅದರ ಬೇರುಗಳ ಬೆಳವಣಿಗೆಯಿಂದ ಕಟ್ಟಡಕ್ಕೆ ಹಾನಿಯೂ ಉಂಟಾಗಬಹುದು.



ಜೀವವೈವಿಧ್ಯಕ್ಕೆ ಕೊಡುಗೆ: ಈ ಮರದ ಹಣ್ಣುಗಳನ್ನು ಹಲವು ಪಕ್ಷಿಗಳು ಮತ್ತು ಸಣ್ಣ ಜೀವಿಗಳು ಆಹಾರವಾಗಿ ಬಳಸುತ್ತವೆ. ಹೀಗಾಗಿ ಪಕ್ಷಿಗಳು ಸೇರಿದಂತೆ ಹಲವು ಜೀವಿಗಳಿಗೆ ಆಹಾರ ಮತ್ತು ಆಶ್ರಯ ಒದಗಿಸುತ್ತದೆ.

ಸಾಂಸ್ಕೃತಿಕ ಮಹತ್ವ: ಈ ಮರಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನವಿದೆ. ಹಿಂದೂ, ಬೌದ್ಧ ಮತ್ತು ಜೈನ ಪರಂಪರೆಗಳಲ್ಲಿಯೂ ಮಹತ್ವವಿದೆ. ಬೌದ್ಧ ಪರಂಪರೆಯಲ್ಲಿ, ಗೌತಮ ಬುದ್ಧರು ಜ್ಞಾನೋದಯ ಪಡೆದದ್ದು ಅಶ್ವತ್ಥದ ಪ್ರಭೇದವಾದ ಬೋಧಿವೃಕ್ಷದ ಕೆಳಗೆ ಎಂಬ ನಂಬಿಕೆ ಇದೆ. ಹೀಗಾಗಿ ಈ ಮರವು ಪ್ರಕೃತಿಯ ಸಂಕೇತವಾಗಿರುವುದರ ಜೊತೆಗೆ ಆಧ್ಯಾತ್ಮಿಕ ಮಹತ್ವವನ್ನೂ ಹೊಂದಿದೆ.

ಪರಿಸರದ ದೃಷ್ಟಿಯಿಂದ: ದೊಡ್ಡ ಗಾತ್ರಕ್ಕೆ ಬೆಳೆಯುವ ಈ ಮರವು ಉತ್ತಮ ನೆರಳನ್ನು ನೀಡುತ್ತದೆ. ಇದರ ವಿಶಾಲವಾದ ಮೇಲಾವರಣವು ಸುತ್ತಮುತ್ತಲಿನ ಪ್ರದೇಶವನ್ನು ತಂಪಾಗಿಡಲು ನೆರವಾಗುತ್ತದೆ. ಇತರ ಹಸಿರು ಪ್ರದೇಶಗಳಂತೆ, ನಗರ ಪ್ರದೇಶಗಳಲ್ಲಿಯೂ ಸ್ಥಳೀಯ ತಾಪಮಾನ ಮತ್ತು ಪರಿಸರದ ಮೇಲೆ ಪ್ರಭಾವ ಬೀರುತ್ತದೆ. ಹೀಗೆ ಸಾಕಷ್ಟು ವಿಶಿಷ್ಟ ಗುಣಗಳನ್ನು ಹೊಂದಿರುವ ಈ ಮರದ ಗಾಳಿ ಅಷ್ಟೇ ತಂಪು.

ಆದರೆ ನಮ್ಮ ಹಿರಿಯರು ಹೇಳೋ ಪ್ರಕಾರ ಮದ್ವೆ ಆಗಿಲ್ಲಾ ಅರಳಿ ಮರ ಸುತ್ತು, ಮಕ್ಕಳಿಲ್ಲ ಅರಳಿ ಮರ ಸುತ್ತು, ದುಡ್ಡು ಇಲ್ಲಾ ಅರಳಿ ಮರ ಸುತ್ತು. ಯಪ್ಪಾ ಅದಕ್ಕೆ ದಾರಗಳನ್ನ ಸುತ್ತೊದೇನು ಕಡ್ಡಿ ಅಚ್ಚೊದೇನು ನೋಡೋಕೆ ಎರಡು ಕಣ್ಣು ಸಾಲಲ್ಲ!

ಆದರೆ, ಒಂದು ವಿಷಯ ಗೊತ್ತಿರಲಿ. ಅಶ್ವತ್ಥ ಮರವು ಇತರ ಹಸಿರು ಸಸ್ಯಗಳಂತೆ ದ್ಯುತಿಸಂಶ್ಲೇಷಣೆಯ ಮೂಲಕ ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ. ಬೆಳಗಿನ ಸಮಯದಲ್ಲಿ ಪ್ರಕೃತಿಯ ನಡುವೆ ನಡೆಯುವುದು ಮನಸ್ಸಿಗೆ ನೆಮ್ಮದಿ ನೀಡಬಹುದು. ಆದರೆ ಅಶ್ವತ್ಥ ಮರವನ್ನು ಸುತ್ತುವುದರಿಂದಲೇ ಶ್ವಾಸಕೋಶದ ಸಮಸ್ಯೆಗಳು ಸುಧಾರಿಸುತ್ತವೆ ಅಥವಾ ನಿರ್ದಿಷ್ಟ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ಹೇಳಲು ಸಾಕಷ್ಟು ವೈಜ್ಞಾನಿಕ ಆಧಾರವಿಲ್ಲ.


ನಿಮಗೂ ಯಾರಾದ್ರು "ಮರ ಸುತ್ತು, ಅದಾಗುತ್ತೆ, ಇದಾಗುತ್ತೆ" ಅಂತ ತಲೆ ಕೆಡಿಸಿದ್ದಾರಾ? ಅಂಥವರು ನನ್ನ ನೆನಪಿಸಿಕೊಳ್ಳೋದನ್ನ ಮಾತ್ರ ಮರೀಬೇಡಿ, ಆಯ್ತಾ?

ಲೇಖನ: ಹರ್ಷಿತ ಪಿ. ಹನುಮಯ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ



ವನಬಂಧ 18



ಎಡದಿಂದ ಬಲಕ್ಕೆ

1. ಗಾಡಿಯನ್ನು ಎಳೆಯುವ ಎತ್ತಿನ ಕುತ್ತಿಗೆಯ ಮೇಲೆ ಇರುವ ಭಾರ. (2)

2. ಈ ಪಕ್ಷಿಯ ಮುಖ ಮಂಡೂಕನಿಗೆ ಹೋಲುತ್ತದೆ (4)

3. ಕಲ್ಲು ಮುಳ್ಳುಗಳಿದ್ದರೂ ಚಟಚಟನೆ ಚಟುವಟಿಕೆಯಿಂದ ಇರುವ ಹಕ್ಕಿ (5)

4. ಎರಡಕ್ಷರದ ಮಾರ್ಜಾಲ (2)

5. ಎಲೆಯ ದಂಟು ಬಲವಾಗುತ್ತ ಹಿಡಿಕೆಯಂತಹ ರಚನೆಯಾಗಿ ಬದಲಾದ ಭಾಗ (2)

6. ಹುಲಿಯಂತಹ ಬೇಟೆಗಾರ ಪ್ರಾಣಿಗಳಿಗೆ ಆಹಾರವಾಗುವ ಈ ಸಸ್ತನಿಗಳು ಪ್ರಾಥಮಿಕವಾಗಿ ಅಧಿಕ ಸಂಖ್ಯೆಯಲ್ಲಿ ಇರುತ್ತವೆ. (2)

7. ಎತ್ತು, ಕುದುರೆಗಾಡಿ ಮುಂತಾದ ವಾಹನಗಳನ್ನು ಓಡಿಸುವಾಗ ಬಳಸುವ ಹಗ್ಗದ ಕೋಲು (4)

8. ಪುರದೊಳಗೆ ಗುನುಗುನಿಸುವ ಈ ಬೆಕ್ಕು ರಾತ್ರಿಯ ಸಮಯದಲ್ಲಿ ಹೆಚ್ಚಾಗಿ ಓಡಾಡುತ್ತದೆ. (5)

ಮೇಲಿನಿಂದ ಕೆಳಕ್ಕೆ

1. ಈ ಹಕ್ಕಿಗೆ ನೊಣ ಹಿಡಿಯುವುದೊಂದೇ ಕೆಲಸ (5)

2. ಕಪ್ಪು ಬಣ್ಣದ ಈ ಬುಲ್‌ಬುಲ್ ಹಕ್ಕಿಗೆ ಕೊಕ್ಕು ಮಾತ್ರ ಗುಲಾಬಿ ಬಣ್ಣದ್ದು (6)

3. ಬೆಳ್ಳಕ್ಕಿಯಂತೆ ಬೆಳ್ಳಗೆ ಸುಂದರವಾಗಿದ್ದರೂ ಕೊಕ್ಕಿನ ತುದಿಯಲ್ಲಿ ಅಗಲವಾದ ಚನೆಯಿದೆ. (6)

4. ಚಂದಿರನು ಪೂರ್ಣಪ್ರಮಾಣದಲ್ಲಿ ಬೆಳಗುತ್ತ ಹರಡುವ ಬೆಳಕು (5)

6. ಐಹೊಳೆ ಪಟ್ಟದ ಕಲ್ಲಿನ ಸಾಲಿಗೆ ಸೇರುವ ಈ ಪ್ರದೇಶ ಒಂದು ಬೀಜದ ಹೆಸರಿನಲ್ಲಿ ಪ್ರಸಿದ್ಧವಾಗಿದೆ. (3)

7. ಕಡಲ ದಂಡೆಗಳಲ್ಲಿ ಏಡಿಗಳನ್ನು ಬಕಬಕನೆ ಭಕ್ಷಿಸುವ ಈ ಹಕ್ಕಿ ಇಲ್ಲಿ ತಲೆಕೆಳಗಾಗಿದೆ (4)

8. ಹೆಬ್ಬುಲಿಯ ಕತೆಯ ಹಸುವೊಂದು ಇಲ್ಲಿ ಕೋಟಿ ಕೋಟಿ ಪುಣ್ಯ ಸಂಪಾದಿಸಿದೆ (4)

9. ಬೆಟ್ಟ, ಗುಡ್ಡ, ಕಾಡು ಇವುಗಳಿಗೆ ಹಳೆಯ ಕನ್ನಡದ ಒಂದು ಹೆಸರು (4)

ವನಬಂಧ – 17 (ಅಕ್ಟೋಬರ್ - 2026) ರ ಉತ್ತರಗಳು

ಎಡದಿಂದ ಬಲಕ್ಕೆ

1. ಸೆಳೆವ 2. ಚಿಟ್ಟುಕೋಳಿ 3. ಕರಿಗಿಡುಗ 5. ಜಡಿಮಳೆ 7. ಅಡವಿ ಕೀಚುಗ 8. ನಾಮ ಕೋಳಿ 9. ಮರಕಪ್ಪೆ 10. ಸಿಂಪಿಗ

ಮೇಲಿನಿಂದ ಕೆಳಕ್ಕೆ

1. ಹಾವಸೆ 2. ಚಿಟವ 3. ಕತ್ತಾಳೆ 4. ಮುಗಿಲು 5. ಗೀಜಗ 6. ಬೆಳೆ 7. ಅರಳಿಮರ 10. ಗದ್ದೆ ಪಿಪಿಳೀಕ

ವನಬಂಧ: ಸುಬ್ಬು ಬಾದಲ್
ಬೆಂಗಳೂರು ಜಿಲ್ಲೆ





ವಿವಿ ಅಂಕಣ

ಎಲಾ... ಎಲೆಯೇ!

ಎಲೆ ಎಲೆಯೇ...
ವಿಸ್ಮಯಗಳು ನಿನ್ನ ಸಾಮಾನ್ಯ ಕಲೆಯೇ?
ನಿರೂಪಣೆಯು ಬರಿಯ ಹಸಿಯೇ?
ಅದರಲ್ಲಿಹುದು ವಿಚಾರ-ಕಲೆಗಳ ಸೆಲೆಯೇ...

ಚಿಕ್ಕಂದಿನಲ್ಲಿ ಶಾಲೆಗೆ ಹೋಗುತ್ತಿದ್ದ ದಾರಿಯಲ್ಲಿ ಸಿಗುತ್ತಿದ್ದ ಹಲವು ಗಿಡಮರಗಳ ಎಲೆಗಳಲ್ಲಿ ಒಂದು ಬಳ್ಳಿಯ ಎಲೆಯು ನಮಗೆ ವಿಶೇಷವಾಗಿ ಹತ್ತಿರವಾಗಿತ್ತು. ಅದಕ್ಕೆ ಕಾರಣವೆಂದರೆ, ಆ ಎಲೆಯ ತೊಟ್ಟು ಸ್ವಲ್ಪ ಉದ್ದವಾದದ್ದು. ಬರೀ ಉದ್ದವಾಗಿದ್ದರೆ ಅದರಲ್ಲಿ ಏನು ವಿಶೇಷತೆ ಎನ್ನುವಿರಾ? ಆ ಉದ್ದದ ತೊಟ್ಟು ನಮಗೆ ಬೇರೆ ಕೆಲಸಕ್ಕೆ ಬರುತ್ತಿತ್ತು. ಆ ಉದ್ದ ತೊಟ್ಟಿನ ಎಲೆಯನ್ನು ಕಿತ್ತು, ತೊಟ್ಟನ್ನು ಎಡಕ್ಕೊಮ್ಮೆ, ಬಲಕ್ಕೊಮ್ಮೆ ಮುರಿದು, ಕೊನೆಯಲ್ಲಿ ಎಲೆಯನ್ನು ಮಡಚಿ ಸ್ವಲ್ಪ ಹರಿದರೆ, ಅದರಲ್ಲಿ ನೆಕ್ಲೆಸ್ (ಸರ) ಮೂಡುತ್ತಿತ್ತು. ಇದನ್ನು ಹಲವಾರು ಗಿಡಗಳ ಎಲೆಗಳಿಂದ ಮಾಡಬಹುದಿತ್ತಾದರೂ ಈ ಎಲೆಯ ತೊಟ್ಟು ಸ್ವಲ್ಪ ಉದ್ದವಾಗಿದ್ದು, ಮುರಿದಾಗ ಕಿತ್ತುಹೋಗದಂತೆ ತೊಟ್ಟಿನ ಹೊರಪದರದಲ್ಲಿ ನಾರಿನ ಅಂಶ ಇದ್ದುದರಿಂದ ಸರ ಹೆಚ್ಚು ಉದ್ದಸಿಗುತ್ತಿತ್ತು.

ಹೀಗೆ ನಮ್ಮ ಸುತ್ತಲಿರುವ ಹತ್ತಾರು ವಸ್ತುಗಳನ್ನು ಬಳಸಿಕೊಂಡು ಅವುಗಳಲ್ಲಿ ಆನಂದ ಪಡುವ ನಾವು, ಬೆಳೆದಂತೆ ಅವುಗಳಿಂದ ನಮಗಾಗುವ ಆರ್ಥಿಕ ಉಪಯೋಗವನ್ನು ಹುಡುಕಲು ಶುರು ಮಾಡುತ್ತೇವೆ. ಉದಾಹರಣೆಗೆ, ಮಿಂಚಿನ ವೇಗದಲ್ಲಿ ಬೇಟೆಯಾಡುವ ಮಿಂಚುಳ್ಳಿ ಪಕ್ಷಿ, ನೀರಿನೊಳಗಿರುವ ಮೀನನ್ನು ಅಷ್ಟು ಸರಾಗವಾಗಿ, ನಿಖರವಾಗಿ


ಬೇಟೆಯಾಡಲು ಅದರ ಕೊಕ್ಕಿನ ಆಕಾರ ಬಹುಮುಖ್ಯ ಪಾತ್ರವಹಿಸುತ್ತದೆ. ಇದನ್ನು ತಿಳಿದ ನಾವು, ಅದರಿಂದ ಪ್ರೇರಣೆ ಪಡೆದು, ಜಗತ್ತಿನ ಅತಿ ವೇಗದ ರೈಲುಗಳಲ್ಲಿ ಒಂದಾದ ಬುಲೆಟ್ ರೈಲಿನ ವೇಗವನ್ನು ಹೆಚ್ಚಿಸಲು ಸಾಧ್ಯವಾಗಿದೆ.

ಹೀಗೆ ಪ್ರಕೃತಿಯಿಂದ ಎಷ್ಟೋ ವಿಚಾರಗಳಲ್ಲಿ ಆಲೋಚನೆಗಳನ್ನು ಹಾಗೂ ಸಮಸ್ಯೆಗಳಿಗೆ ಪರಿಹಾರಗಳನ್ನು ಎರವಲು ಪಡೆಯುವ ನಾವು, ಎಲೆಗಳಿಂದ ಏನಾದರೂ ಉಪಯೋಗ ಪಡೆದುಕೊಂಡಿದ್ದೇವೆಯೇ ಎಂದು ಯೋಚಿಸಿದರೆ, ತಕ್ಷಣ ನೆನಪಿಗೆ ಬರುವಷ್ಟು ವಿಚಾರಗಳು ಸಿಗುವುದಿಲ್ಲ. ಆದರೆ ಇಲ್ಲೊಂದು ಚೈನೀಸ್ ಮನಿ ಪ್ಲಾಂಟ್‌ನ (Pilea peperomioides) ಎಲೆಯಲ್ಲಿ ಗಮನಿಸಿದ ವಿಚಾರವೊಂದು ಮುಂದೆ ಯಾವುದಾದರೂ ಒಂದು ಹೊಸ ಆವಿಷ್ಕಾರಕ್ಕೆ ನಾಂದಿಯಾಗಬಹುದು ಎನಿಸುತ್ತಿದೆ.



ಸಾಮಾನ್ಯವಾಗಿ ಎಲೆಗಳ ಮೇಲೆ ಒಂದು ರೀತಿಯ ಬಲೆಯಂತಿರುವ ರಚನೆಯನ್ನು ಗಮನಿಸಿರುತ್ತೀರಿ. ಆ ಬಲೆಯು ಎಲೆಯೊಳಗೆ ನೀರು ಮತ್ತು ಪೋಷಕಾಂಶಗಳನ್ನು ಸಾಗಿಸುವ ನಾಳಗಳಿಂದ ರೂಪುಗೊಂಡಿರುತ್ತದೆ. ಇಲ್ಲಿ, ಚೈನೀಸ್ ಮನಿ ಪ್ಲಾಂಟ್‌ನ ಎಲೆಯಲ್ಲಿ ಆ ರಚನೆ ಸ್ವಲ್ಪ ವಿಶೇಷವಾಗಿದೆ. ನಾವು ಗಮನಿಸಿದಂತೆ, ಎಲೆಗಳ ನಾಳಗಳಲ್ಲಿ ಮೊದಲು ಎಲೆಯನ್ನು ಎರಡು ಭಾಗ ಮಾಡುವಂತೆ ಒಂದು ದೊಡ್ಡ ನಾಳವಿರುತ್ತದೆ. ಉಳಿದ ನಾಳಗಳು ಎಡಬಲಕ್ಕೆ ಚಲಿಸಿ ಕವಲೊಡೆಯುತ್ತವೆ. ಅವು ಮತ್ತೆ ಕವಲೊಡೆದು ಎಲೆಯ ಬಹುತೇಕ ಎಲ್ಲಾ ಭಾಗಗಳಿಗೂ ಹರಡುತ್ತವೆ. ಈ ಚೈನೀಸ್ ಮನಿ ಪ್ಲಾಂಟ್‌ನಲ್ಲೂ ಅದೇ ರೀತಿ ಇದೆ. ಆದರೆ ಆ ನಾಳಗಳು ಸಾಗಿರುವ ರೀತಿ ಬೇರೆ ಗಿಡಗಳ ಎಲೆಗಳಿಗಿಂತ ವಿಭಿನ್ನವಾಗಿದೆ. ಆ ವಿಭಿನ್ನತೆಯಿಂದ ಮೂಡಿದ ಆಕೃತಿಯೂ ವಿಶೇಷವಾಗಿದೆ.


ನೋಡಿ, ಈ ಚಿತ್ರದಲ್ಲಿ ತೋರಿಸಿರುವಂತೆ, ಈ ಆಕೃತಿಯು ನಾವು ನಗರಾಭಿವೃದ್ಧಿಯಲ್ಲಿ ಬಳಸುವ 'ವೆರೊನೋಯ್ ಡಯಾಗ್ರಮ್' (Voronoi diagram) ಅನ್ನು ಹೋಲುತ್ತದೆ. ಹೌದು, ಬಲಕ್ಕಿರುವ ಚಿತ್ರ ವೆರೊನೋಯ್ ಡಯಾಗ್ರಮ್; ಎಡಕ್ಕಿರುವುದು ಅದನ್ನೇ ಹೋಲುವ ಚೈನೀಸ್ ಮನಿ ಪ್ಲಾಂಟ್‌ನ ಎಲೆಯ ಚಿತ್ರ. ನೋಡಿ, ಎರಡರಲ್ಲೂ ಎಷ್ಟು ಸಾಮ್ಯತೆ ಇದೆ?



ಈಗ ವೆರೊನೋಯ್ ಡಯಾಗ್ರಮ್ ಅನ್ನು ಅರ್ಥೈಸಿಕೊಳ್ಳೋಣ. ಈ ಆಕೃತಿಯನ್ನು ರೂಪಿಸಲು ಒಂದು ಜಾಗದ ವಿಸ್ತೀರ್ಣವನ್ನು ಹಲವು ಭಾಗಗಳಾಗಿ ವಿಂಗಡಿಸಲಾಗುತ್ತದೆ. ಆ ವಿಂಗಡಣೆ ಹೇಗಿರಬೇಕು ಎಂದರೆ, ಪ್ರತಿಯೊಂದು ಭಾಗದಲ್ಲಿಯೂ ಒಂದು ನಿರ್ದಿಷ್ಟ ಬಿಂದುವಿರುತ್ತದೆ. ಆ ಭಾಗದ ಯಾವುದೇ ಸ್ಥಳದಿಂದ ನೋಡಿದರೂ, ಆ ಬಿಂದುವೇ ಇತರ ಬಿಂದುಗಳಿಗಿಂತ ಹತ್ತಿರದಲ್ಲಿರಬೇಕು. ಹೀಗೆ ರೂಪುಗೊಳ್ಳುವ ವಿನ್ಯಾಸವನ್ನು ವೆರೊನೋಯ್ ಡಯಾಗ್ರಮ್ ಎನ್ನುತ್ತಾರೆ.

ಇದರಿಂದ ಆಗುವ ಪ್ರಯೋಜನವಾದರೂ ಏನು? ನಗರಗಳನ್ನು ರೂಪಿಸುವಾಗ ಅಥವಾ ವಿನ್ಯಾಸಗೊಳಿಸುವಾಗ ಇದು ಉಪಯುಕ್ತವಾಗಬಹುದು. ಉದಾಹರಣೆಗೆ, ತುರ್ತು ಸಂದರ್ಭದಲ್ಲಿ ಈ ವಿಂಗಡಣೆಯ ಆಧಾರದ ಮೇಲೆ ರೂಪಿಸಿದ ನಗರದಲ್ಲಿ ಬೆಂಕಿಯ ಅವಘಡ ಸಂಭವಿಸಿದರೆ, ಪ್ರತಿಯೊಂದು ಪ್ರದೇಶಕ್ಕೂ ಹತ್ತಿರದಲ್ಲಿರುವ ಅಗ್ನಿಶಾಮಕ ಠಾಣೆಯನ್ನು ಗುರುತಿಸಬಹುದು. ಇದರಿಂದ ತುರ್ತು ಸೇವೆಗಳ ವ್ಯಾಪ್ತಿಯನ್ನು ಯೋಜಿಸಲು ನೆರವಾಗುತ್ತದೆ. ಹಾಗೆಯೇ, ನೀರಿನ ವಿತರಣಾ ವ್ಯವಸ್ಥೆ ಮತ್ತು ಇತರ ಸೇವೆಗಳ ಯೋಜನೆಗಳಲ್ಲಿಯೂ ಈ ವಿನ್ಯಾಸ ಉಪಯುಕ್ತವಾಗಬಹುದು.

ಈ ವೆರೊನೋಯ್ ಡಯಾಗ್ರಮ್‌ಗೆ ಹೋಲುವ ವಿನ್ಯಾಸ ಎಲೆಯಲ್ಲಿ ಕಂಡುಬಂದಿರುವುದು ಆ ಎಲೆಗೆ ಯಾವುದೋ ಒಂದು ಮುಖ್ಯ ಪ್ರಯೋಜನವನ್ನು ನೀಡುತ್ತಿರಬಹುದು ಎಂಬ ಕುತೂಹಲವನ್ನು ಸಂಶೋಧಕರಲ್ಲಿ ಮೂಡಿಸಿದೆ.



ಬಹುಶಃ, ಎಲೆಯಿಂದ ನೀರನ್ನು ಹೊರಹಾಕುವ ಹೈಡಥೋಡ್ (hydathodes) ಎಂಬ ಸಣ್ಣ ರಂಧ್ರಗಳಿಂದ ನೀರನ್ನು ಸಾಗಿಸುವ ಪ್ರಮುಖ ನಾಳಗಳನ್ನು ದೂರವಿಡುವ ವಿನ್ಯಾಸ ಇದಾಗಿರಬಹುದು. ಈ ರಂಧ್ರಗಳ ಮೂಲಕ ಕೆಲವು ಸಸ್ಯಗಳಲ್ಲಿ ಹೆಚ್ಚುವರಿ ನೀರು ಹೊರಹೋಗುತ್ತದೆ. ನಾಳಗಳು ಮತ್ತು ಈ ರಂಧ್ರಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ.

ಸಸ್ಯಗಳ ಬೆಳವಣಿಗೆಯಲ್ಲಿ ಆಕ್ಸಿನ್ (auxin) ಎಂಬ ಹಾರ್ಮೋನ್ ಪ್ರಮುಖ ಪಾತ್ರವಹಿಸುತ್ತದೆ. ಚೈನೀಸ್ ಮನಿ ಪ್ಲಾಂಟ್‌ನ ಎಲೆಗಳ ಬೆಳವಣಿಗೆಯನ್ನು ವಿವರಿಸಲು ರೂಪಿಸಿದ ಕಂಪ್ಯೂಟರ್ ಮಾದರಿಗಳ ಪ್ರಕಾರ, ಈ ಹಾರ್ಮೋನ್‌ನ ಅಲೆಗಳು ರಂಧ್ರಗಳ ಸುತ್ತ ಹರಡಿ, ಪರಸ್ಪರ ಸಂಧಿಸುವ ಮೂಲಕ ನಾಳಗಳ ವಿನ್ಯಾಸ ರೂಪುಗೊಳ್ಳಬಹುದು. ಆದರೆ ಈ ವಿನ್ಯಾಸದ ನಿಜವಾದ ಪ್ರಯೋಜನವೇನು ಮತ್ತು ಅದು ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ಸಂಪೂರ್ಣವಾಗಿ ತಿಳಿಯಲು ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವಿದೆ ಎಂದು ಈ ಸಂಶೋಧನೆಯಲ್ಲಿ ಭಾಗಿಯಾದ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಮುಂದೊಂದು ದಿನ ಈ ಸಂಶೋಧನೆ ಮುಂದುವರಿದು, ಅದರಿಂದ ಹೊಸದೊಂದು ವಿಚಾರ ಹೊರಬಂದು, ಆ ವಿಚಾರವನ್ನು ಬಳಸಿ ಮಹತ್ತರವಾದ ಆವಿಷ್ಕಾರವೊಂದು ಸಾಧ್ಯವಾಗಲಿ ಎನ್ನುವುದು ನಮ್ಮೆಲ್ಲರ ಆಶಯ.



ಅತಿಸಾಮಾನ್ಯವಾಗಿ ಕಾಣುವ ಈ ಎಲೆಗಳೂ ಸಹ ವಿಜ್ಞಾನಿಗಳನ್ನು ಮತ್ತು ವಿಜ್ಞಾನ ಚಿಂತಕರನ್ನು ಅತಿಯಾಗಿ ಕಾಡಬಲ್ಲ ವಿಚಾರಗಳನ್ನು ತಮ್ಮೊಳಗೆ ಇಟ್ಟುಕೊಂಡಿರಬಹುದು ಎನ್ನುವುದಕ್ಕೆ ಈ ಸಂಶೋಧನೆಯೇ ಸಾಕ್ಷಿ. ವಿಜ್ಞಾನವೆಂದರೆ ಅದಲ್ಲವೇ?


ವಿ (ವಿಶೇಷ, ವಿಭಿನ್ನ, ವಿಸ್ಮಯ, ವಿವಿಧ, ವಿಮಲ, ವಿನೂತನ, ವಿಚಾರಿತ, ವಿಕಸಿತ, ವಿಸ್ತೃತ, ವಿಚಿತ್ರ...) ಜ್ಞಾನ!

ಹುಡುಕಿದವರಿಗೆ ಹುಡುಕಿದಷ್ಟು.
ಕಂಡವರಿಗೆ ಕಂಡಷ್ಟು.
ಅನುಭವಿಸಿದವರಿಗೆ ಅನುಭವಿಸಿದಷ್ಟು!

ಮೂಲ: https://www.snexplores.org/article/plant-leaves-veins-geometric-pattern

ಲೇಖನ: ಜೈಕುಮಾರ್ ಆರ್.
ಬೆಂಗಳೂರು ನಗರ ಜಿಲ್ಲೆ

ಮಲೆನಾಡಿನ ಮಳೆ



© ಧನರಾಜ್ ಎಂ.

ಮಲೆನಾಡಿನ ಮಳೆ
ಧರೆಗೆ ನೀ ಇಳಿಯೇ ಮಳೆ
ಮುಂಗಾರಿನ ಹರುಷದ ಕಳೆ
ದುಮ್ಮಿಕ್ಕಿ ಹರಿಯುವ ಜರಿಯ ಬಳೆ

ಗಮಕದ ರಾಗ ನಿನ್ನ ಮಳೆಯ ಅಲೆ
ಬಳುಕುವ ನೈದಿಲೆಯ ಹನಿಯ ಸೆಲೆ
ಹಿಂಗಾರು ಮಳೆ, ತುಂತುರು ಪ್ರೇಮದ ಓಲೆ
ಮಧುರ ಸಿಂಚನದ ಮಲೆನಾಡಿನ ಎಲೆ

ಸ್ವರ್ಗದ ಅಮಲಿನ ಮುತ್ತಿನ ಮಳೆ
ಮೈ-ಮನಸ್ಸುಗಳ ತೊಳೆಯುವ ಸ್ವಾತಿ ಮಳೆ
ಗುಡ್ಡ ಮೇಲಿಂದ ಜಾರುವ ಇಳೆಯ ಮಳೆ
ಹೊನ್ನಿನ ಮಲೆನಾಡಿನ ಸೌಂದರ್ಯದ ತೇರಿನ ಮಳೆ

- ಸೌಮ್ಯ ಎಸ್. ಬಿ.
ಮಂಡ್ಯ ಜಿಲ್ಲೆ

ಪ್ರಕೃತಿ ಬಿಂಬ



ಚೊಟ್ಟಿ ಸೂರೆಗಿಡುಗ **© ಚೈತನ್ಯ ಶರ್ಮ**

ಭಾರತೀಯ ಉಪಖಂಡದ ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಈ ಬೇಟೆಹಕ್ಕಿಯು ಅಕ್ಸಿಪಿಟ್ರಿಡೇ (Accipitridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ನಿಸೇಟಸ್ ಸಿಹೇರ್ಟಸ್ (*Nisaetus cirrhatus*) ಎಂದು ಕರೆಯಲಾಗುತ್ತದೆ. ಸುಮಾರು 60–72 ಸೆಂ. ಮೀ ಉದ್ದವಿರುವ ಈ ಹಕ್ಕಿಯ ದೇಹದ ಮೇಲ್ಭಾಗವು ಕಂದು ಬಣ್ಣದ್ದಾಗಿದ್ದು, ಕೆಳಭಾಗವು ಬಿಳಿ ಅಥವಾ ತಿಳಿ ಬಣ್ಣದಲ್ಲಿರುತ್ತದೆ. ಎದೆ ಮತ್ತು ಗಂಟಲಿನ ಮೇಲೆ ಕಂದು ಅಥವಾ ಕಪ್ಪು ಬಣ್ಣದ ಉದ್ದನೆಯ ಪಟ್ಟೆಗಳಿದ್ದು, ರೆಕ್ಕೆಗಳ ಕೆಳಭಾಗ ಮತ್ತು ಬಾಲದ ಮೇಲೆ ಅಡ್ಡ ಪಟ್ಟೆಗಳಿರುತ್ತವೆ. ಕೆಲವು ಹಕ್ಕಿಗಳ ತಲೆಯ ಮೇಲೆ ಎದ್ದು ಕಾಣುವ ಕಿರೀಟದಂತಹ ಗರಿಗಳಿರುತ್ತವೆ. ಕಾಡುಗಳು, ಮರಗಳಿಂದ ಕೂಡಿದ ತೆರೆದ ಪ್ರದೇಶಗಳು ಹಾಗೂ ಕೃಷಿ ಭೂಮಿಗಳ ಸುತ್ತಮುತ್ತಲಿನ ಆವಾಸಸ್ಥಾನಗಳಲ್ಲಿ ಇವು ಕಂಡುಬರುತ್ತವೆ. ಸಣ್ಣ ಪಕ್ಷಿಗಳು, ಸಸ್ತನಿಗಳು ಮತ್ತು ಸರೀಸೃಪಗಳು ಇವುಗಳ ಮುಖ್ಯ ಆಹಾರವಾಗಿವೆ. ಎತ್ತರದ ಮರಗಳಲ್ಲಿ ಕಡ್ಡಿಗಳನ್ನು ಬಳಸಿ ದೊಡ್ಡ ಗೂಡು ಕಟ್ಟಿ, ಸಾಮಾನ್ಯವಾಗಿ ಒಂದು ಮೊಟ್ಟೆಯನ್ನಿಟ್ಟು ಮರಿ ಮಾಡುತ್ತದೆ.



ನವರಂಗ © ಚೈತನ್ಯ ಶರ್ಮ

ಭಾರತೀಯ ಉಪಖಂಡದ ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಈ ಸುಂದರ, ವರ್ಣರಂಜಿತ ಹಕ್ಕಿಯು ಪಿಟ್ಟಿಡೇ (Pittidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಪಿಟ್ಟಾ ಬ್ರಾಕ್ಯುರಾ (*Pitta brachyura*) ಎಂದು ಕರೆಯಲಾಗುತ್ತದೆ. ಸುಮಾರು 18 ಸೆಂ. ಮೀ ಉದ್ದವಿರುವ ಇದರ ದೇಹದ ಮೇಲ್ಭಾಗವು ಹಸಿರು ಬಣ್ಣದ್ದಾಗಿದ್ದು, ಭುಜದ ಮೇಲೆ ನೀಲಿ ಬಣ್ಣದ ತೇಪೆ, ಹೊಟ್ಟೆಯ ಕೆಳಭಾಗದಲ್ಲಿ ಕೆಂಪು ಬಣ್ಣ ಹಾಗೂ ಕಣ್ಣಿನ ಮೇಲ್ಭಾಗದಲ್ಲಿ ಕಪ್ಪು ಪಟ್ಟಿಯನ್ನು ಹೊಂದಿರುತ್ತದೆ. ತಲೆಯ ಮೇಲೆ ತಿಳಿ ಕಂದು ಬಣ್ಣದ ಪಟ್ಟೆಗಳಿದ್ದು, ಗಂಟಲು ಬಿಳಿ ಬಣ್ಣದ್ದಾಗಿರುತ್ತದೆ. ಕುರುಚಲು ಕಾಡುಗಳು ಮತ್ತು ದಟ್ಟ ಪೊದೆಗಳಿರುವ ಪ್ರದೇಶಗಳಲ್ಲಿ ವಾಸಿಸುವ ಈ ಹಕ್ಕಿಯು ನೆಲದ ಮೇಲೆ ಬಿದ್ದಿರುವ ಒಣ ಎಲೆಗಳನ್ನು ಕೆದಕಿ ಕೀಟಗಳು, ಎರೆಹುಳುಗಳು ಮತ್ತು ಇತರ ಸಣ್ಣ ಅಕಶೇರುಕಗಳನ್ನು ಆಹಾರವಾಗಿ ಸೇವಿಸುತ್ತದೆ. ಮುಂಜಾನೆ ಮತ್ತು ಮುಸ್ಸಂಜೆಯಲ್ಲಿ 'ವೀಟ್-ಟ್ಯೂ' ಎಂಬ ಎರಡು ಸ್ವರಗಳ ವಿಶಿಷ್ಟ ಕೂಗನ್ನು ಕೇಳಬಹುದು. ಮಳೆಗಾಲದಲ್ಲಿ ಸಂತಾನೋತ್ಪತ್ತಿ ಮಾಡುವ ಈ ಹಕ್ಕಿಯು ನೆಲದ ಮೇಲೆ ಅಥವಾ ಮರದ ಕೆಳಗಿನ ಕೊಂಬೆಗಳಲ್ಲಿ ಒಣ ಎಲೆ ಮತ್ತು ಹುಲ್ಲುಗಳಿಂದ ಗೂಡು ಕಟ್ಟಿ ಸಾಮಾನ್ಯವಾಗಿ 4–6 ಮೊಟ್ಟೆಗಳನ್ನು ಮೊಟ್ಟೆಯನ್ನಿಟ್ಟು ಮರಿ ಮಾಡುತ್ತದೆ.



ಬಾಳೆಗುಬ್ಬಿ © ಚೈತನ್ಯ ಶರ್ಮ

ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದ ವಿವಿಧ ಪ್ರದೇಶಗಳ ತೇವಾಂಶಭರಿತ ಕಾಡುಗಳು, ಕಾಡಂಚುಗಳು ಹಾಗೂ ಬಾಳೆ ಮತ್ತು ಏಲಕ್ಕಿ ತೋಟಗಳಲ್ಲಿ ಕಂಡುಬರುವ ಈ ಪುಟ್ಟ ಹಕ್ಕಿಯು ನೆಕ್ಟರಿನಿಡೇ (Nectariniidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಅರಕ್ನೊಥೆರಾ ಲಾಂಗಿರೋಸ್ಟ್ರಾ (*Arachnothera longirostra*) ಎಂದು ಕರೆಯಲಾಗುತ್ತದೆ. ಸುಮಾರು 13–16 ಸೆಂ. ಮೀ ಉದ್ದವಿರುವ ಇದರ ದೇಹವು ಆಲಿವ್ ಹಸಿರು ಮಿಶ್ರಿತ ಹಳದಿ ಬಣ್ಣದ್ದಾಗಿದ್ದು, ಗಂಟಲು ಮತ್ತು ಎದೆಯ ಭಾಗವು ಬೂದು ಮಿಶ್ರಿತ ಬಿಳಿ ಬಣ್ಣದಲ್ಲಿರುತ್ತದೆ. ಇದರ ಉದ್ದವಾದ, ಬಾಗಿದ ಕೊಕ್ಕು ವಿಶಿಷ್ಟ ಲಕ್ಷಣವಾಗಿದೆ. ಗಂಡು ಮತ್ತು ಹೆಣ್ಣು ಹಕ್ಕಿಗಳು ನೋಡಲು ಬಹುತೇಕ ಒಂದೇ ರೀತಿ ಇರುತ್ತವೆ. ಹೂವುಗಳ ಮಕರಂದ, ಜೇಡಗಳು ಮತ್ತು ಸಣ್ಣ ಕೀಟಗಳನ್ನು ಆಹಾರವಾಗಿ ಸೇವಿಸುತ್ತದೆ. ವಿಶೇಷವಾಗಿ ಬಾಳೆಗಿಡ ಮತ್ತು ಶುಂಠಿ ಕುಟುಂಬದ ಸಸ್ಯಗಳ ಹೂವುಗಳಿಂದ ಮಕರಂದವನ್ನು ಹೀರುವುದರಿಂದ, ಅವುಗಳ ಪರಾಗಸ್ಪರ್ಶದಲ್ಲಿಯೂ ಪ್ರಮುಖ ಪಾತ್ರವಹಿಸುತ್ತದೆ. ಬಾಳೆ ಎಲೆ ಅಥವಾ ಇತರ ಅಗಲವಾದ ಎಲೆಗಳ ಕೆಳಭಾಗಕ್ಕೆ ಜೇಡರ ಬಲೆ ಮತ್ತು ಸಸ್ಯನಾರುಗಳ ಸಹಾಯದಿಂದ ಪುಟ್ಟ ಜೋಲಿಯಾಕಾರದ ಗೂಡನ್ನು ಕಟ್ಟಿ ಸಾಮಾನ್ಯವಾಗಿ ಎರಡು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತದೆ.



ಮೂರುಬೆರಳಿನ ಮಿಂಚುಳ್ಳಿ © ಚೈತನ್ಯ ಶರ್ಮ

ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದ ವಿವಿಧ ಪ್ರದೇಶಗಳ ದಟ್ಟವಾದ, ತೇವಾಂಶಭರಿತ ಕಾಡುಗಳಲ್ಲಿ ಹಾಗೂ ಸಣ್ಣ ಹಳ್ಳ-ತೊರೆಗಳ ಸುತ್ತಮುತ್ತ ಕಂಡುಬರುವ ಈ ಪುಟ್ಟ ಮಿಂಚುಳ್ಳಿಯು ಅಲ್ಸಿಡಿನಿಡೇ (Alcedinidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಸೆಯಿಕ್ಸ್ ಎರಿಥಾಕಾ (*Ceyx erithaca*) ಎಂದು ಕರೆಯಲಾಗುತ್ತದೆ. ಸುಮಾರು 13 ಸೆಂ. ಮೀ ಉದ್ದವಿರುವ ಈ ಹಕ್ಕಿಯ ಬೆನ್ನು ನೀಲಿ ಮಿಶ್ರಿತ ಕಪ್ಪು ಬಣ್ಣದಲ್ಲಿದ್ದು, ತಲೆ ಮತ್ತು ದೇಹದ ಮೇಲ್ಭಾಗದಲ್ಲಿ ನೇರಳೆ ಮಿಶ್ರಿತ ಕೆಂಪು-ಕಂದು ಬಣ್ಣವಿರುತ್ತದೆ. ಹೊಟ್ಟೆಯ ಭಾಗವು ಕಿತ್ತಳೆ ಮಿಶ್ರಿತ ಹಳದಿ ಬಣ್ಣದಲ್ಲಿದ್ದು, ಕೊಕ್ಕು ಕೆಂಪು ಬಣ್ಣದ್ದಾಗಿರುತ್ತದೆ. ಕೀಟಗಳು, ಜೇಡಗಳು, ಸಣ್ಣ ಏಡಿಗಳು ಮತ್ತು ಕಪ್ಪೆಗಳನ್ನು ಆಹಾರವಾಗಿ ಸೇವಿಸುತ್ತದೆ. ಮಣ್ಣಿನ ದಿಬ್ಬಗಳಲ್ಲಿ ಸುರಂಗದಂತಹ ಬಿಲವನ್ನು ತೋಡಿ ಗೂಡು ಕಟ್ಟಿ ಸಾಮಾನ್ಯವಾಗಿ 4–5 ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತದೆ.

ಚಿತ್ರ: ಚೈತನ್ಯ ಶರ್ಮ
ಲೇಖನ: ದೀಪ್ತಿ ಎನ್.

ನೀವೂ ಕಾನನಕ್ಕೆ ಬರೆಯಬಹುದು



ಶಕ್ತಿ ನಮ್ಮ ದೈನಂದಿನ ಬದುಕಿನ ಅವಿಭಾಜ್ಯ ಅಂಗ. ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲದಂತಹ ಇಂಧನಗಳು ವಿದ್ಯುತ್ ಉತ್ಪಾದನೆಯ ಪ್ರಮುಖ ಮೂಲಗಳಾಗಿವೆ. ಇವುಗಳ ಲಭ್ಯತೆ ಸೀಮಿತವಾಗಿದ್ದು, ಅತಿಯಾದ ಬಳಕೆಯಿಂದ ಪರಿಸರ ಮಾಲಿನ್ಯ ಮತ್ತು ಹವಾಮಾನ ಬದಲಾವಣೆಯಂತಹ ಸಮಸ್ಯೆಗಳು ಉಂಟಾಗುತ್ತವೆ. ಆದ್ದರಿಂದ ಶಕ್ತಿಯನ್ನು ಮಿತವಾಗಿ ಬಳಸುವುದು ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಮುಂದಿನ ಪೀಳಿಗೆಗಾಗಿ ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ.

ಶಕ್ತಿಯ ಮಹತ್ವ ಮತ್ತು ಅದರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಲು ಪ್ರತಿ ವರ್ಷ ಡಿಸೆಂಬರ್ 14ರಂದು ಭಾರತದಲ್ಲಿ ರಾಷ್ಟ್ರೀಯ ಶಕ್ತಿ ಸಂರಕ್ಷಣಾ ದಿನವನ್ನು ಆಚರಿಸಲಾಗುತ್ತದೆ. ವಿದ್ಯುತ್ ಬಳಕೆಯನ್ನು ಕಡಿಮೆ ಮಾಡುವುದು, ಸಮರ್ಥ ಸಾಧನಗಳನ್ನು ಬಳಸುವುದು ಮತ್ತು ನವೀಕರಿಸಬಹುದಾದ ಶಕ್ತಿಯ ಮೂಲಗಳಿಗೆ ಆದ್ಯತೆ ನೀಡುವುದು ನಮ್ಮಿಂದ ಸಾಧ್ಯವಾಗುವ ಸಣ್ಣ ಪ್ರಯತ್ನಗಳು.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

ಕಾನನ ಪತ್ರಿಕೆಯ ಇ-ಮೇಲ್ ವಿಳಾಸ: kaanana.mag@gmail.com
ಅಂಚೆ ವಿಳಾಸ:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್: 560083. ಗೆ ಕಳಿಸಿಕೊಡಬಹುದು.

WCG
Wildlife Conservation Group

ಕಾನನ ಸಿರಿ 2026

ಕನ್ನಡದಲ್ಲಿ ಪ್ರಕೃತಿಗೆ ಧ್ವನಿ ನೀಡೋಣ



ವೈಲ್ಡ್‌ಲೈಫ್ ಕನ್ಸರ್ವೇಷನ್ ಗ್ರೂಪ್ (WCG) ಆಯೋಜಿಸುವ
ವಾರ್ಷಿಕ ಪ್ರಕೃತಿ ಬರಹ ಹಾಗೂ ಛಾಯಾಚಿತ್ರ ಸ್ಪರ್ಧೆ

ಕಾಡು, ವನ್ಯಜೀವಿ, ಪರಿಸರ ಮತ್ತು ಜೀವವೈವಿಧ್ಯದ ಕಥೆಗಳನ್ನು
ಕನ್ನಡದಲ್ಲಿ ಜನರಿಗೆ ತಲುಪಿಸುವ ವೇದಿಕೆ.

2026ರ ಗುರಿ – 150+ ಹೊಸ ಪ್ರಕೃತಿ ಬರಹಗಳು

. ಈ ಮಹತ್ವದ ಪ್ರಯತ್ನಕ್ಕೆ ನಿಮ್ಮ ಸಹಕಾರ, ಬೆಂಬಲ ಅತ್ಯಗತ್ಯ.

ಪ್ರಾಯೋಜಕರಾಗಿ, ಹಿತೈಷಿಗಳಾಗಿ ನಮ್ಮೊಂದಿಗೆ
ಕೈಜೋಡಿಸಿ:

₹50,000 – ಕಾನನ ಸಿರಿ ಪ್ರಧಾನ ಪ್ರಾಯೋಜಕರು
₹25,000 – ಕಾನನ ಸಿರಿ ಸಹ ಪ್ರಾಯೋಜಕರು
₹1,000 to 5,000 - ಕಾನನ ಮಿತ್ರ ಮಂಡಳಿ



**ನಿಮ್ಮ ಬೆಂಬಲದಿಂದ ಕನ್ನಡದಲ್ಲಿ ಪ್ರಕೃತಿ ಮತ್ತು
ಪರಿಸರದ ಅರಿವು
ಇನ್ನಷ್ಟು ಜನರನ್ನು ತಲುಪಲಿ.**


kaanana.mag@gmail.com
9008261066
kaananamag.in

ಕಾನನ ಸಿರಿ 2026ರ ಭಾಗವಾಗಿ!

ಕಾನನ ಸಿರಿ – 2026


ಕಾನನ ಇ-ಮಾಸಿಕದ ವಾರ್ಷಿಕ ಸ್ಪರ್ಧೆ

ಪರಿಸರ ಲೇಖನ ಸ್ಪರ್ಧೆ
ವನ್ಯಜೀವಿ ಮ್ಯಾಕ್ರೋ ಛಾಯಾಚಿತ್ರ ಸ್ಪರ್ಧೆ



ಬಹುಮಾನಗಳು

ಪ್ರಥಮ ಬಹುಮಾನ – ₹10,000
ದ್ವಿತೀಯ ಬಹುಮಾನ - ₹7,500
ತೃತೀಯ ಬಹುಮಾನ – ₹5,000



ಕಾನನ ಸಿರಿ – 2026

ಪರಿಸರ ಲೇಖನ ಸ್ಪರ್ಧೆ

ವಿಷಯಗಳು

* ನನ್ನ ಹಸಿರು ಕಥೆ
* ವನ್ಯಜೀವಿ ಸನ್ನಿವೇಶಗಳು, ಸಮಸ್ಯೆಗಳು ಮತ್ತು ಪರಿಹಾರಗಳು
* ಪ್ರಕೃತಿ ಕಲಿಕೆಯ ಚಟುವಟಿಕೆಗಳು
* ಪರಿಸರ, ಜನಪದ, ಸಂಸ್ಕೃತಿ ಮತ್ತು ಸಂರಕ್ಷಣೆ



ನಿಯಮಗಳು

* ಕನ್ನಡದಲ್ಲಿರಬೇಕು, 500–800 ಪದಗಳಲ್ಲಿರಬೇಕು
* ಸ್ವಂತ ಬರಹವಾಗಿರಬೇಕು
* Word ಮತ್ತು PDF ಎರಡೂ ಕಳುಹಿಸಿ
* ಇ-ಮೇಲ್‌ನಲ್ಲಿ ಮೊಬೈಲ್ ಸಂಖ್ಯೆ ಕಳುಹಿಸುವುದು ಕಡ್ಡಾಯ

ಲೇಖನ ಸ್ಪರ್ಧೆಗೆ ನೋಂದಣಿ ಅವಶ್ಯಕತೆ ಇರುವುದಿಲ್ಲ
ಕಳುಹಿಸಬೇಕಾದ ವಿಳಾಸ: kaanana.mag@gmail.com
ಇ-ಮೇಲ್ ವಿಷಯ: ಕಾನನ ಸಿರಿ ಲೇಖನ ಸ್ಪರ್ಧೆ – 2026

ಕಾನನ ಸಿರಿ – 2026

ಛಾಯಾಚಿತ್ರ ಸ್ಪರ್ಧೆ

ವನ್ಯಜೀವಿ ಮ್ಯಾಕ್ರೋ ಛಾಯಾಚಿತ್ರ ಸ್ಪರ್ಧೆ
ಮೊದಲ 100 ಅರ್ಹ ಸ್ಪರ್ಧಿಗಳಿಗೆ ಮನ್ನಣೆ ಪತ್ರ

* ನೋಂದಣಿ ಶುಲ್ಕ ₹100, ಗರಿಷ್ಠ 3 ಚಿತ್ರಗಳು
* DSLR / ಮಿರರ್‌ಲೆಸ್ ಕ್ಯಾಮೆರಾ ಮಾತ್ರ
* ನೈಸರ್ಗಿಕ ಆವಾಸಸ್ಥಾನದ ವನ್ಯಜೀವಿ ಮಾತ್ರ
* ಸ್ವಂತ ಚಿತ್ರ ಮಾತ್ರ; AI, ಕಂಪೋಸಿಟ್, ಫೋಕಸ್ ಸ್ಟ್ಯಾಕಿಂಗ್ ಬೇಡ
* JPEG, ಛಾಯಾಚಿತ್ರದ ಉದ್ದದ ಬದಿ ಗರಿಷ್ಠ 2,000 px
* ಮೂಲ ಪ್ರತಿಗಳನ್ನು ನಿಮ್ಮಲ್ಲಿ ಉಳಿಸಿಕೊಳ್ಳಿ



ಕಾನನ ಸಿರಿ – 2026

ನೋಂದಣಿ

ನೋಂದಣಿ ಹೇಗೆ?

1. QR ಸ್ಕ್ಯಾನ್ ಮಾಡಿ, ಗೂಗಲ್ ಫಾರ್ಮ್ ಭರ್ತಿ ಮಾಡಿ
2. ₹100 ಪಾವತಿಸಿ
3. ಪಾವತಿದ ರಸೀದಿಯ ಜೊತೆ ಚಿತ್ರಗಳನ್ನು kaanana.mag@gmail.com ಗೆ ಕಳುಹಿಸಿ

ನಿಯಮ ಉಲ್ಲಂಘಿಸಿದ್ದಾರೆ ಅಥವಾ ವನ್ಯಜೀವಿಗಳಿಗೆ ತೊಂದರೆ ನೀಡಿದ್ದಾರೆ ಎಂದು ಭಾಸವಾದರೆ ಚಿತ್ರಗಳು ಅನರ್ಹ.

ಕೊನೆಯ ದಿನಾಂಕ: 5 ಡಿಸೆಂಬರ್ 2026